ಕರ್ನಾಟಕ ಸರ್ಕಾರ

## ಆರ್ಥಿಕ ಇಲಾಖೆ

Economy (Finance) Department

# ವಾರ್ಷಿಕ ವರದಿ

೧೯೯೪-೯೫

# ಆರ್ಥಿಕ ಇಲಾಖೆ

## 1994-95 ನೇ ಸಾಲಿನ ವಾರ್ಷಿಕ ವರದಿ

# ಅ ನು ಸೂ ಚಿ


1. ವಾಣಿಜ್ಯ ತೆರಿಗೆ ಇಲಾಖೆ .... 1–16

2. ರಾಜ್ಯ ಲೆಕ್ಕ ಪತ್ರ ಇಲಾಖೆ .... 17–22

3. ಕರ್ನಾಟಕ ಸರ್ಕಾರಿ ವಿಮಾ ಇಲಾಖೆ .... 23–27

4. ಖಜಾನೆ ಇಲಾಖೆ .... 28–33

5. ಸಣ್ಣ ಉಳಿತಾಯ ಮತ್ತು
ರಾಜ್ಯ ಲಾಟರಿ ಇಲಾಖೆ .... 34–40

# 1994-95ನೇ ಸಾಲಿನ ವಾಣಿಜ್ಯ ತೆರಿಗೆ ಇಲಾಖೆಯ ವಾರ್ಷಿಕ ವರದಿ

ವಾಣಿಜ್ಯ ತೆರಿಗೆ ಆಯುಕ್ತರು ವಾಣಿಜ್ಯ ತೆರಿಗೆ ಇಲಾಖೆಯ ಮುಖ್ಯಸ್ಥರು ಇವರಿಗೆ ಇಲಾಖೆಯ ಆಡಳಿತಕ್ಕೊಳಪಟ್ಟಿರುವ ಕರ್ನಾಟಕ ಮಾರಾಟ ತೆರಿಗೆ, ಕೇಂದ್ರ ಮಾರಾಟ ತೆರಿಗೆ ಮತ್ತು ಇತರ ಆರು ತೆರಿಗೆ ಕಾಯಿದೆಗಳನ್ನು ಜಾರಿಗೊಳಿಸುವಲ್ಲಿ ಐದು ಅಪರ ವಾಣಿಜ್ಯ ತೆರಿಗೆ ಆಯುಕ್ತರು, ಇಬ್ಬರು ಜಂಟಿ ವಾಣಿಜ್ಯ ತೆರಿಗೆ ಆಯುಕ್ತರು,- ಜಂಟಿ ಆಯುಕ್ತರು (ತನಿಖೆ) ಮತ್ತು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಕಾನೂನು) ಇವರುಗಳು ರಾಜ್ಯ ಮಟ್ಟದಲ್ಲಿ ಸೇವೆ ನೀಡುತ್ತಾರೆ.

ತೆರಿಗೆ ಸಂಗ್ರಹದಲ್ಲಿ ತೀವ್ರ ಮತ್ತು ಪರಿಣಾಮಕಾರಿ ಆಡಳಿತಕ್ಕಾಗಿ ರಾಜ್ಯವನ್ನು ಐದು ವಲಯಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ವಲಯಕ್ಕೆ ಒಬ್ಬರು ಅಪರ ವಾಣಿಜ್ಯ ತೆರಿಗೆ ಆಯುಕ್ತರನ್ನು ಮುಖ್ಯಸ್ಥರನ್ನಾಗಿ ನಿಯೋಜಿಸಲಾಗಿದೆ. ಇದರಂತೆ 1) ಬೆಂಗಳೂರು ನಗರ ವಿಭಾಗ-1 ಮತ್ತು 3 ಬೆಂಗಳೂರು ವಲಯ-1ರಲ್ಲಿ 2) ಬೆಂಗಳೂರು ವಿಭಾಗ-2 ಮತ್ತು 4,ಮತ್ತು ಬೆಂಗಳೂರು ವಿಭಾಗ, ಬೆಂಗಳೂರು ನಗರ ವಲಯ-2ರಲ್ಲಿ, 3) ದಾವಣಗೆರೆ ಮತ್ತು ಗುಲ್ಬರ್ಗಾ ವಿಭಾಗಗಳು ದಾವಣಗೆರೆ ವಲಯದಲ್ಲಿ, 4) ಮೈಸೂರು ಮಂಗಳೂರು ಮತ್ತು ಮಲೆನಾಡು ವಿಭಾಗಗಳು ಮೈಸೂರು ವಲಯಗಳಲ್ಲಿ, 5) ಬೆಳಗಾವಿ ಮತ್ತು ಧಾರವಾಡ ವಿಭಾಗಗಳು ಬೆಳಗಾವಿ ವಲಯಗಳಲ್ಲಿ ಸೇರಿಸಿ ಒಟ್ಟು ಐದು ವಲಯಗಳನ್ನಾಗಿ ವಿಭಜಿಸಲಾಗಿದೆ. ತೆರಿಗೆ ಸಂಗ್ರಹಣೆಗಾಗಿ ರಾಜ್ಯವನ್ನು 12 ವಾಣಿಜ್ಯ ತೆರಿಗೆ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ವಿಭಾಗಕ್ಕೂ ವಿವಿಧ ಕಾಯ್ದೆಗಳ ಆಡಳಿತಕ್ಕೆ ಹೊಣೆಯಾಗಿರುವ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಮುಖ್ಯಸ್ಥರಾಗಿರುತ್ತಾರೆ. ವರ್ತಕರಿಂದ ಬಂದ ಮೇಲ್ಮನವಿಗಳ ಬಗ್ಗೆ ವ್ಯವಹರಿಸಲು ಪ್ರತಿ ವಿಭಾಗದಲ್ಲಿ ಒಬ್ಬರು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಮೇಲ್ಮನವಿ) ಸಹ ಇದ್ದಾರೆ. ಇದಲ್ಲದೆ ಆರು ಅಪರ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಮೇಲ್ಮನವಿ)ಇವರು ಮಂಗಳೂರು ಬೆಳಗಾವಿ ಮತ್ತು ಧಾರವಾಡ ಬೆಂಗಳೂರು ನಗರ ವಿಭಾಗ-1,2 ಮತ್ತು 3 ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಗುಪ್ತವಾರ್ತೆ ಮತ್ತು ಜಾಗೃತಿಕ ಚಟುವಟಿಗಳಿಗೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಕೇಂದ್ರ ಕಛೇರಿಯುಳ್ಳ ದಕ್ಷಿಣ ವಲಯಕ್ಕೆ ಒಂದು ಬೆಳಗಾವಿಯಲ್ಲಿ ಕೇಂದ್ರ ಕಛೇರಿಯುಳ್ಳ ಉತ್ತರ ವಲಯಕ್ಕೆ ಒಂದು, ಗುಲ್ಬರ್ಗಾದಲ್ಲಿ ಕೇಂದ್ರ ಕಛೇರಿಯುಳ್ಳ ಪೂರ್ವ ವಲಯಕ್ಕೆ ಒಂದು, ಮಂಗಳೂರಿನಲ್ಲಿ ಕೇಂದ್ರ ಕಛೇರಿಯುಳ್ಳ ಪಶ್ಚಿಮ ವಲಯಕ್ಕೆ ಒಂದು, ದಾವಣಗೆರೆಯಲ್ಲಿ ಕೇಂದ್ರ ಕಛೇರಿಯುಳ್ಳ ಕೇಂದ್ರ ವಲಯಕ್ಕೆ ಒಂದು, ಮೈಸೂರಿನಲ್ಲಿ ಕೇಂದ್ರ ಕಛೇರಿಯುಳ್ಳ ಮೈಸೂರು ವಲಯಕ್ಕೆ ಒಂದು, ಹುಬ್ಬಳ್ಳಿ ಹಾಗೂ ಶಿವಮೊಗ್ಗದಲ್ಲಿ ಒಂದರಂತೆ ಇಲಾಖೆಯಲ್ಲಿ ಎಂಟು ಗುಪ್ತವಾರ್ತೆ ವಿಭಾಗಳಿವೆ. ಪ್ರತಿಯೊಂದು ವಿಭಾಗಕ್ಕೂ ತಮ್ಮ ಕಾರ್ಯವ್ಯಾಪ್ತಿಯಲ್ಲಿನ ಗುಪ್ತವಾರ್ತೆ ಮತ್ತು ಸಂಬಂಧಪಟ್ಟದ ಜಾಗೃತಿ ಚಟುವಟಿಕೆಗಳಿಗೆ ಹೊಣೆಯಾಗಿರುವ ಒಬ್ಬರು ವಾಣಿಜ್ಯ ತೆರಿಗೆ ಜಂಟಿ

ಆಯುಕ್ತರು (ಗುಪ್ತವಾರ್ತೆ) ಮುಖ್ಯಸ್ಥರಾಗಿರುತ್ತಾರೆ. ಇದು ಅಲ್ಲದೆ ಬೆಂಗಳೂರು ನಗರದಲ್ಲಿ ಜಾಗೃತಿ ಚಟುವಟಿಕೆಗಳ ನಿರ್ವಹಣೆಗಾಗಿಯೇ ಒಬ್ಬರು ಜಂಟಿ ಆಯುಕ್ತರನ್ನು ನಿಯೋಜಿಸಲಾಗಿದೆ.

ವಾಣಿಜ್ಯ ತೆರಿಗೆ ಇಲಾಖೆಯು ಈ ಕೆಳಕಂಡ ಅಧಿನಿಯಮಗಳ ಕಾರ್ಯವನ್ನು ನಿರ್ವಹಿಸುತ್ತದೆ.

1) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ -1957
2) ಕೇಂದ್ರ ಮಾರಾಟ ತೆರಿಗೆ ಅಧಿನಿಯಮ -1956
3) ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ -1957
4) ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ -1958
5) ಕರ್ನಾಟಕ ವೃತ್ತಿಗಳ, ಕಸಬುಗಳ, ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ -1976
6) ಕರ್ನಾಟಕ ವಿಲಾಸ ವಸ್ತುಗಳ (ಹೋಟೇಲುಗಳು ಮತ್ತು ವಸತಿ ಗೃಹಗಳು) ಮೇಲಿನ ತೆರಿಗೆ ಅಧಿನಿಯಮ -1979
7) ಮೈಸೂರು ಪಣ ತೆರಿಗೆ ಅಧಿನಿಯಮ -1932
8) ಕರ್ನಾಟಕ ಸ್ಥಳೀಯ ಪ್ರದೇಶದೊಳಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ವಿಧಿಸುವ ತೆರಿಗೆ ಅಧಿನಿಯಮ -1979

1994-95 ನೇ ಸಾಲಿನ ಎಲ್ಲಾ ಅಧಿನಿಯಮಗಳಡಿಯಲ್ಲಿ ಕರಸಂಗ್ರಹಣೆ ಗುರಿಯು ಆಯವ್ಯಯ ಪರಿಷ್ಕೃತ ಅಂದಾಜಿನಂತೆ (ಇಲಾಖೆಯ ಪ್ರಸ್ತಾವನೆ) 2914.00 ಕೋಟಿ ರೂ.ಗಳಾಗಿದ್ದು ವರದಿಯ ವರ್ಷದಲ್ಲಿ 1995ರ ಫೆಬ್ರವರಿ ಅಂತ್ಯದವರೆಗೆ ಒಟ್ಟು 2368.45 ಕೋಟಿ ರೂ.ಗಳು ಸಂಗ್ರಹಣೆಯಾಗಿದ್ದು (ಲೋಕೋಪಯೋಗಿ, ಅರಣ್ಯ ಮತ್ತು ಇತರೆ ಇಲಾಖೆಗಳಿಂದ ಖಜಾನೆಗೆ ನೇರವಾಗಿ ಸಂದಾಯವಾಗಿದ್ದನ್ನು ಹೊರತುಪಡಿಸಿ) ಕಳೆದ ಸಾಲಿನ ಇದೇ ಅವಧಿಗೆ ಸಂಗ್ರಹಣೆಯಾದ 2069.52 ಕೋಟಿ ರೂ.ಗಳಿಗೆ ಹೋಲಿಸಿದರೆ ಶೇಕಡ 14.44 ರಷ್ಟು ಬೆಳವಣಿಗೆಯಾಗುತ್ತದೆ. 1994-95 ನೇ ಸಾಲಿನಲ್ಲಿ ಫೆಬ್ರವರಿ 95 ರ ಅಂತ್ಯದವರೆಗೆ ಮತ್ತು ಕಳೆದ 5 ವರ್ಷಗಳಲ್ಲಿ ಸಂಗ್ರಹಣೆಯಾದ ವಾರ್ಷಿಕ ತೆರಿಗೆ ವಿವರಗಳನ್ನು [illegible] ಕೆಳಗೆ ಕೊಡಲಾಗಿದೆ.

| ವರ್ಷ | ಸಂಗ್ರಹಣೆಯಾದ ಮೊಬಲಗು (ಕೋಟಿ ರೂ.ಗಳಲ್ಲಿ) | ವಾರ್ಷಿಕ ಬೆಳವಣಿಗೆ (ಶೇಕಡ) |
|---|---|---|
| 1 | 2 | 3 |
| 1989-90 | 1232.45 | 11.01 |

| 1 | 2 | 3 |
|---|---|---|
| 1990-91 | 1489.93 | 20.89 |
| 1991-92 | 1857.00 | 24.60 |
| 1992-93 | 2027.63 | 9.19 |
| 1993-94 | 2577.58 | 27.12 |
| 1994-95 | 2368.45 | 14.44 |
| (ಫೆಬ್ರವರಿ ಅಂತ್ಯದ ವರೆಗೆ) | | |

**ಮಾರಾಟ ತೆರಿಗೆ (ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ) :**

ರಾಜಸ್ವ ಆದಾಯದಲ್ಲಿ ಹೆಚ್ಚಿನ ಭಾಗವು ಮಾರಾಟ ತೆರಿಗೆಯಿಂದ ಬರುತ್ತದೆ ಮತ್ತು ಇದು ವಾಣಿಜ್ಯ ತೆರಿಗೆಗಳ ಒಟ್ಟು ತೆರಿಗೆ ಆದಾಯದಲ್ಲಿ ಸುಮಾರು ಶೇಕಡಾ 88 ರಷ್ಟು ಇದೆ. ಪ್ರಸಕ್ತ ವರ್ಷ ಮತ್ತು ಕಳೆದ 5 ವರ್ಷಗಳಲ್ಲಿ ಈ ಮೂಲದಿಂದ ಸಂಗ್ರಹಣೆಯಾದ ಮೊಬಲಗುಗಳನ್ನು ಈ ಕೆಳಗೆ ಕೊಡಲಾಗಿದೆ.

| ವರ್ಷ | ಸಂಗ್ರಹಣೆಯಾದ ಮೊಬಲಗು (ಕೋಟಿ ರೂ.ಗಳಲ್ಲಿ) | ವಾರ್ಷಿಕ ಬೆಳವಣಿಗೆ (ಶೇಕಡ) |
|---|---|---|
| 1989-90 | 1081.27 | 9.52 |
| 1990-91 | 1316.92 | 21.79 |
| 1991-92 | 1653.23 | 25.53 |
| 1992-93 | 1775.79 | 7.41 |
| 1993-94 | 2277.96 | 28.28 |
| 1994-95 | 2085.44 | 15.54 |
| (ಫೆಬ್ರವರಿ ಅಂತ್ಯದವರೆಗೆ) | | |

1994-95ನೇ ಸಾಲಿನ ಮಾರಾಟ ತೆರಿಗೆ ಸಂಗ್ರಹಣೆ ಪರಿಷ್ಕೃತ ಗುರಿಯನ್ನು (ಪರಿಷ್ಕೃತ ಅಂದಾಜಿನ ಪ್ರಸ್ತಾವಣೆಯಂತೆ) 2621.00 ಕೋಟಿ ರೂ.ಗಳಿಗೆ ನಿಗದಿಪಡಿಸಲಾಯಿತು. ವರದಿಯ ವರ್ಷದಲ್ಲಿ 1995ರ ಫೆಬ್ರವರಿ ಅಂತ್ಯದವರೆಗೆ

ಸಂಗ್ರಹಣೆಯಾದ ಮಾರಾಟ ತೆರಿಗೆಯು ಮೊತ್ತ 2085.44 ಕೋಟಿ ರೂ.ಗಳು. ಇದು ಕಳೆದ ಸಾಲಿಗೆ ಇದೇ ಅವಧಿಗೆ ಹೋಲಿಸಿದರೆ ಶೇ15.54 ಬೆಳವಣಿಗೆ ಕಂಡು ಬರುತ್ತದೆ.

1994-95ರ ಆಯವ್ಯಯ ಅಂದಾಜಿನಲ್ಲಿ ಈ ಅಧಿನಿಯಮಗಳಡಿಯಲ್ಲಿ 7.20 ಕೋಟಿ ರೂ.ಗಳು ಅಧಿಕ ಸಂಪನ್ಮೂಲ ಪ್ರಸ್ತಾಪವಿದ್ದು, ಹಲವಾರು ಸರಕುಗಳಿಗೆ ತೆರಿಗೆ ರಿಯಾಯಿತಿ ಮತ್ತು ಪರಿಹಾರಗಳನ್ನು ಘೋಷಿಸಲಾಗಿದೆ.

1989-90 ರಿಂದ 1994-95 ರವರೆಗೆ ಮಾರಾಟ ತೆರಿಗೆಯು ತಗಾದೆ ಸಂಗ್ರಹಣೆ ಮತ್ತು ಬಾಕಿ ಈ ಕೆಳಕಂಡಂತಿವೆ.

(ಕೋಟಿ ರೂ.ಗಳಲ್ಲಿ)

| ವರ್ಷ | ತಗಾದೆ (ಬಾಕಿ ಸೇರಿ) | ಸಂಗ್ರಹಣೆ | ಬಾಕಿ |
|---|---|---|---|
| 1989-90 | 1243.74 | 1068.19 | 175.55 |
| 1990-91 | 1519.18 | 1298.09 | 221.09 |
| 1991-92 | 1919.68 | 1652.38 | 267.30 |
| 1992-93 | 2014.60 | 1758.69 | 255.91 |
| 1993-94 | 2651.44 | 2263.95 | 387.49 |
| 1994-95 (ಡಿಸೆಂಬರ್ ಅಂತ್ಯದವರೆಗೆ ತಾತ್ಕಾಲಿಕ) | 2021.33 | 1630.12 | 391.21 |

**ಬಾಕಿಗಳು**

ಪ್ರಸಕ್ತ ವರ್ಷದಲ್ಲಿ ಸಾಧ್ಯವಾದಷ್ಟು ಮಾರಾಟ ತೆರಿಗೆಗೆ ಸಂಬಂಧಪಟ್ಟ ಬಾಕಿಯನ್ನು ವಸೂಲಿ ಮಾಡಲು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಇಲಾಖೆಯು ಮಾಡುತ್ತಿದೆ. ವಿವಿಧ ಕಾಯ್ದೆಗಳಡಿಯಲ್ಲಿ 31-3-94 ರಂದು ಮತ್ತು 31-12-94 ರಂದು ಇದ್ದಂತೆ ತೆರಿಗೆ ಬೇಡಿಕೆ (ತಗಾದೆ) ಸಂಗ್ರಹಣೆ ಮತ್ತು ಬಾಕಿ ವಿವರಗಳನ್ನು ಕ್ರಮವಾಗಿ ಅನುಬಂಧ-1 ಮತ್ತು 2 ರಲ್ಲಿ ತೋರಿಸಲಾಗಿದೆ.

**ನೋಂದಣಿ :**

1994-95ನೇ ವರ್ಷದ ಸೆಪ್ಟೆಂಬರ್ ಕೊನೆಯಲ್ಲಿ ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ಮೇರೆಗೆ ರಾಜ್ಯದಲ್ಲಿ ನೋಂದಾಯಿತರಾದ

ವರ್ತಕರ ಸಂಖ್ಯೆ ಹಾಗೂ ಕಳೆದ ಎರಡು ವರ್ಷಗಳ ಸಂಬಂಧಪಟ್ಟ ಸಂಖ್ಯೆಗಳು ಈ ಕೆಳಗಿನಂತಿವೆ.

| ಕರ್ನಾಟಕ ಮಾರಾಟ ತೆರಿಗೆ | | | ಕೇಂದ್ರ ಮಾರಾಟ ತೆರಿಗೆ | | |
|---|---|---|---|---|---|
| 31-3-93 | 31-3-94 | 30-9-94 | 31-3-93 | 31-3-94 | 30-9-94 |
| 205426 | 212737 | 218836 | 115836 | 122029 | 127539 |

**ತೆರಿಗೆ ನಿರ್ಧಾರಣೆಗಳು :**

1994ರ ಏಪ್ರಿಲ್ ಒಂದರಲ್ಲಿದ್ದಂತೆ ಕರ್ನಾಟಕ ಮಾರಾಟ ತೆರಿಗೆ ಮೇರೆಗೆ 157911 ತೆರಿಗೆ ನಿರ್ಧಾರಣೆ ಪ್ರಕರಣಗಳು ಮತ್ತು ಕೇಂದ್ರ ಮಾರಾಟ ತೆರಿಗೆ ಮೇರೆಗೆ 96174 ಪ್ರಕರಣಗಳು ಬಾಕಿ ಇದ್ದು, 1994 ಡಿಸೆಂಬರ್ ಅಂತ್ಯದವರೆಗೆ ಕರ್ನಾಟಕ ಮಾರಾಟ ತೆರಿಗೆ ಮೇರೆಗೆ 195568 ಪ್ರಕರಣಗಳು ಮತ್ತು ಕೇಂದ್ರ ಮಾರಾಟ ತೆರಿಗೆ ಮೇರೆಗೆ 107023 ಪ್ರಕರಣಗಳು ಸೇರ್ಪಡೆಯಾದವು. 1994ರ ಡಿಸೆಂಬರ್ ಅಂತ್ಯದವರೆಗೆ ಕರ್ನಾಟಕ ಮಾರಾಟ ತೆರಿಗೆ ಮೇರೆಗೆ 132931 ಪ್ರಕರಣಗಳು ಮತ್ತು ಕೇಂದ್ರ ಮಾರಾಟ ತೆರಿಗೆ ಮೇರೆಗೆ 68692 ಪ್ರಕರಣಗಳು ವಿಲೇವಾರಿಯಾಗಿ ಕರ್ನಾಟಕ ಮಾರಾಟ ತೆರಿಗೆಯಲ್ಲಿ 220548 ಪ್ರಕರಣಗಳು, ಕೇಂದ್ರ ಮಾರಾಟ ತೆರಿಗೆಯಲ್ಲಿ 134505 ಪ್ರಕರಣಗಳು ಬಾಕಿ ಉಳಿದಿವೆ. ಕರ ನಿರ್ಧಾರಣೆಗಳಿಗೆ ಸಂಬಂಧಪಟ್ಟ ಕಳೆದ 5 ವರ್ಷಗಳ ಅಂಕಿ ಅಂಶಗಳ ವಿವರಗಳು ಈ ಕೆಳಕಂಡಂತಿವೆ.

| ವರ್ಷಗಳು | ವರ್ಷದ ಪ್ರಾರಂಭದಲ್ಲಿ ವಿಲೇವಾರಿಯಾಗದೇ ಇದ್ದ ಪ್ರಕರಣಗಳು | ಪ್ರಾಪ್ತವಾದ ಪ್ರಕರಣಗಳ ಸಂಖ್ಯೆ | ಒಟ್ಟು ಮೊತ್ತ | ವಿಲೇವಾರಿಯಾದ ಪ್ರಕರಣಗಳ ಸಂಖ್ಯೆ | ಬಾಕಿ ಪ್ರಕರಣಗಳು |
|---|---|---|---|---|---|
| | | **ಕರ್ನಾಟಕ ಮಾರಾಟ ತೆರಿಗೆ** | | | |
| 1989-90 | 158328 | 207411 | 365739 | 235628 | 130111 |
| 1990-91 | 130111 | 221071 | 351182 | 221289 | 129893 |
| 1991-92 | 129893 | 160224 | 290117 | 158746 | 131371 |
| 1992-93 | 131371 | 169827 | 301198 | 163151 | 138047 |
| 1993-94 | 138047 | 186716 | 324763 | 166852 | 157911 |
| 1994-95 (ಡಿಸೆಂಬರ್ 94ರ ಅಂತ್ಯದವರೆಗೆ) | 157911 | 195568 | 353479 | 132931 | 220548 |

## ಕೇಂದ್ರ ಮಾರಾಟ ತೆರಿಗೆ

| ವರ್ಷಗಳು | ವರ್ಷದ ಪ್ರಾರಂಭದಲ್ಲಿ ವಿಲೇವಾರಿಯಾಗದೇ ಇದ್ದ ಪ್ರಕರಣಗಳು | ಪ್ರಾಪ್ತವಾದ ಪ್ರಕರಣಗಳ ಸಂಖ್ಯೆ ವರ್ಗಾವಣೆ/ಕಡಿತ ಗೊಳಿಸಿದ ನಂತರ | ಒಟ್ಟು ನಿಷ್ಕಳ ಸಂಖ್ಯೆ | ವಿಲೇವಾರಿಯಾದ ಪ್ರಕರಣಗಳ ಸಂಖ್ಯೆ | ಬಾಕಿ ಪ್ರಕರಣಗಳು |
|---|---|---|---|---|---|
| 1989-90 | 89039 | 115164 | 204203 | 123123 | 81080 |
| 1990-91 | 81080 | 116859 | 197939 | 117498 | 80441 |
| 1991-92 | 80441 | 80506 | 160947 | 80794 | 80153 |
| 1992-93 | 80153 | 89734 | 169887 | 980370 | 84517 |
| 1993-94 | 84517 | 101058 | 185575 | 89401 | 96174 |
| 1994-95 (ಡಿಸೆಂಬರ್ 94ರ ಅಂತ್ಯದ ವರೆಗೆ) | 96174 | 107023 | 203197 | 68692 | 134505 |

### ಮನವಿ (ಅಪೀಲುಗಳು)

1994-95ನೇ ಸಾಲಿನಲ್ಲಿ ಡಿಸೆಂಬರ್ 94ರ ಅಂತ್ಯದವರೆಗೆ ರಾಜ್ಯದ ಎಲ್ಲಾ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು ಮತ್ತು ಉಪಆಯುಕ್ತರು (ಮೇಲ್ಮನವಿ) ಇವರಲ್ಲಿ ಕರ್ನಾಟಕ ಮಾರಾಟ ತೆರಿಗೆ ಅಡಿಯಲ್ಲಿ ಒಟ್ಟು 11826 ಮನವಿಗಳು ವಿಲೇವಾರಿಗೆ ಇದ್ದು ಅವುಗಳಲ್ಲಿ 5495 ಪ್ರಕರಣಗಳು ವಿಲೇವಾರಿಯಾಗಿ 6331 ಪ್ರಕರಣಗಳು ಬಾಕಿ ಉಳಿದಿವೆ. ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ಮೇರೆಗೆ ಕಳೆದ 5 ವರ್ಷಗಳಲ್ಲಿ

[illegible] ಪ್ರಾರಂಭದ ಶಿಲ್ಕು, ವಿಲೇವಾರಿ ಮತ್ತು ಅಂತ್ಯದ ಶಿಲ್ಕುಗಳ ಮಾಹಿತಿಯು ಈ ಕೆಳಕಂಡಂತಿದೆ.

### ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಅಪೀಲುಗಳು)

| ವರ್ಷ | ಪ್ರಾರಂಭದ ಶಿಲ್ಕು | | ಜಮೆಗಳು | | ಒಟ್ಟು | | ವಿಲೇಗಳು | | ಅಂತ್ಯದ ಶಿಲ್ಕು | |
|---|---|---|---|---|---|---|---|---|---|---|
| | ಕಮಾತ | ಕೇಮಾತ | ಕಮಾತ | ಕೇಮಾತ | ಕಮಾತ | ಕೇಮಾತ | ಕಮಾತ | ಕೇಮಾತ | ಕಮಾತ | ಕೇಮಾತ |
| 1989-90 | 6086 | 1542 | 5869 | 1422 | 11955 | 2964 | 4759 | 1208 | 7196 | 1756 |
| 1990-91 | 7196 | 1756 | 5981 | 1459 | 13177 | 3215 | 5796 | 1391 | 7381 | 1824 |
| 1991-92 | 7381 | 1824 | 8412 | 1920 | 15793 | 3744 | 8033 | 1792 | 7765 | 1952 |
| 1992-93 | 7765 | 1952 | 5571 | 1262 | 13336 | 3214 | 6960 | 1696 | 3676 | 1518 |
| 1993-94 | 3676 | 1518 | 8064 | 1299 | 11740 | 2817 | 7577 | 1899 | 4163 | 918 |
| 1994-95 (ಡಿಸೆಂಬರ್ 94 ಅಂತ್ಯದವರೆಗೆ) | 4163 | 918 | 4050 | 1040 | 8213 | 1958 | 4215 | 991 | 3998 | 967 |

### ವಾಣಿಜ್ಯ ತೆರಿಗೆ ಉಪ ಆಯುಕ್ತರು (ಅಪೀಲುಗಳು)

| ವರ್ಷ | ಪ್ರಾರಂಭದ ಶಿಲ್ಕು | | ಜಮೆಗಳು | | ಒಟ್ಟು | | ವಿಲೇಗಳು | | ಅಂತ್ಯದ ಶಿಲ್ಕು | |
|---|---|---|---|---|---|---|---|---|---|---|
| | ಕಮಾತ | ಕೇಮಾತ | ಕಮಾತ | ಕೇಮಾತ | ಕಮಾತ | ಕೇಮಾತ | ಕಮಾತ | ಕೇಮಾತ | ಕಮಾತ | ಕೇಮಾತ |
| 1989-90 | 5723 | 241 | 5608 | 264 | 11331 | 505 | 5274 | 272 | 6057 | 233 |
| 1990-91 | 6057 | 233 | 4254 | 207 | 10311 | 440 | 4644 | 184 | 5667 | 256 |
| 1991-92 | 5667 | 256 | 3726 | 205 | 9393 | 461 | 4344 | 220 | 5049 | 241 |
| 1992-93 | 5049 | 241 | 2539 | 119 | 7588 | 360 | 4002 | 228 | 3586 | 132 |
| 1993-94 | 3586 | 132 | 2511 | 66 | 6097 | 198 | 4055 | 112 | 2042 | 86 |
| 1994-95 (ಡಿಸೆಂಬರ್ 94 ಅಂತ್ಯದವರೆಗೆ) | 2042 | 86 | 1571 | 32 | 3613 | 118 | 1280 | 57 | 2333 | 61 |

**ಜಾಗೃತಿ ಚಟುವಟಿಕೆಗಳು :**

ಈ ಚಟುವಟಿಕೆಗಳಲ್ಲಿ ಶೋಧನೆ ನಡೆಸುವುದು, ಶಂಕಿತ ವರ್ತಕರ ಪರಿವೀಕ್ಷಣೆ, ಪರೀಕ್ಷಾ ಖರೀದಿಗಳು, ಚೆಕ್‌ಪೋಸ್ಟ್ ಜಾಗೃತಿ ಚಟುವಟಿಕೆಗಳು ಮತ್ತು ಮಾಹಿತಿಗಳ ಮೇಲೆ ಕಾರ್ಯಪ್ರವೃತ್ತವಾಗುವುದು ಸೇರಿದೆ. 1993-94ರಲ್ಲಿ 69.23 ಕೋಟಿ ರೂಗಳಷ್ಟು ತೆರಿಗೆ ಹೊಣೆಯುಳ್ಳ ಸುಮಾರು 1958.06 ಕೋಟಿ ರೂಗಳ ಬಚ್ಚಿಟ್ಟ ವಹಿವಾಟುಗಳನ್ನು ಪತ್ತೆ ಹಚ್ಚಿ 4269 ಅಂಗಡಿಗಳ

ಕರನಿರ್ಧಾರಣೆಗಳು :

ಪ್ರಸಕ್ತ ವರ್ಷದ ಪ್ರಾರಂಭದಲ್ಲಿ 7631 ಪ್ರಕರಣಗಳು ಬಾಕಿಯಿದ್ದು, 1994ರ ಡಿಸೆಂಬರ್ ಅಂತ್ಯದವರೆಗೆ 4357 ಪ್ರಕರಣಗಳು ಸೇರ್ಪಡೆಯಾದವು. ಡಿಸೆಂಬರ್ 94ರ ಅಂತ್ಯದವರೆಗೆ 3173 ಪ್ರಕರಣಗಳು ವಿಲೆಯಾಗಿ 8810 ಪ್ರಕರಣಗಳು ಬಾಕಿ ಉಳಿದಿವೆ.

**ಕರ್ನಾಟಕ ವೃತ್ತಿ, ಕಸುಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ - 1976 :**

1993-94ರಲ್ಲಿ ಈ ಅಧಿನಿಯಮದ ಮೇರೆಗೆ 77.98 ಕೋಟಿ ರೂ.ಗಳು ತೆರಿಗೆ ಆದಾಯ ಸಂಗ್ರಹಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 95.00 ಕೋಟಿ ರೂ.ಗಳನ್ನು ನಿರೀಕ್ಷಿಸಲಾಗಿದ್ದು 79.64 ಕೋಟಿ ರೂ.ಗಳನ್ನು ಫೆಬ್ರವರಿ 95ರ ಅಂತ್ಯದವರೆಗೆ ವಸೂಲ್ಮಾಡಲಾಗಿದೆ. ಇದು ಕಳೆದ ಸಾಲಿನಲ್ಲಿ ಇದೆ ಅವಧಿಗೆ ಸಂಗ್ರಹಿಸಲಾದ ತೆರಿಗೆ ಮೇಲೆ ಶೇ. 20.90ರಷ್ಟು ಬೆಳವಣಿಗೆ ದರ ಹೊಂದಿದೆ.

**ಕರ್ನಾಟಕ ವಿಲಾಸ (ಹೋಟೆಲುಗಳು ಮತ್ತು ವಸತಿ ಗೃಹಗಳು) ತೆರಿಗೆ ಅಧಿನಿಯಮ 1979 :**

1993-94ರಲ್ಲಿ 11.65 ಕೋಟಿ ರೂ.ಗಳನ್ನು ಸಂಗ್ರಹಿಸಲಾಯಿತು. 94-95ರಲ್ಲಿ 16.00 ಕೋಟಿ ರೂ.ಗಳನ್ನು ನಿರೀಕ್ಷಿಸಲಾಗಿದ್ದು ಫೆಬ್ರವರಿ 95ರಲ್ಲಿ ಅಂತ್ಯದವರೆಗೆ 15.64 ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದೆ. ಇದು ಕಳೆದ ವರ್ಷದಲ್ಲಿ ಇದೇ ಅವಧಿಗೆ ಸಂಗ್ರಹಿಸಲಾದ ತೆರಿಗೆ ಮೇಲೆ ಶೇಕಡಾ 30.55 ರಷ್ಟು ಬೆಳವಣಿಗೆ ದರ ಹೊಂದಿದೆ.

**ಕರ್ನಾಟಕ ಸ್ಥಳೀಯ ಪ್ರದೇಶಕ್ಕೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ವಿಧಿಸುವ ತೆರಿಗೆ ಅಧಿನಿಯಮ 1979 :**

ಈ ಅಧಿನಿಯಮದ ಮೇರೆಗೆ 93-94ರಲ್ಲಿ 132.68 ಕೋಟಿ ರೂ.ಗಳನ್ನು ಸಂಗ್ರಹಿಸಲಾಯಿತು. 1994-95ರಲ್ಲಿ 110.00 ಕೋಟಿ ರೂ.ಗಳನ್ನು ನಿರೀಕ್ಷಿಸಲಾಗಿದ್ದು 1995ರ ಫೆಬ್ರವರಿ ಅಂತ್ಯದವರೆಗೆ 116.77 ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 71 ಸರಕುಗಳ ಮೇಲಿನ ಪ್ರವೇಶ ತೆರಿಗೆಯನ್ನು ರದ್ದು ಪಡಿಸಿರುವುದರಿಂದ ಆದಾಯದಲ್ಲಿ ಇಳಿಮುಖವಾಗಿದೆ.

**ಮೈಸೂರು ಪಣ ತೆರಿಗೆ ಅಧಿನಿಯಮ 1932 :**

ಈ ಅಧಿನಿಯಮದ ನಿರ್ವಹಣೆಯನ್ನು 1982ರ ಜನವರಿ 14ರಿಂದ ವಾಣಿಜ್ಯ ತೆರಿಗೆ ಇಲಾಖೆಗೆ ವಹಿಸಲಾಗಿದೆ. ಮೊದಲು ಇದನ್ನು ಕಂದಾಯ ಇಲಾಖೆಯವರು ನಿರ್ವಹಿಸುತ್ತಿದ್ದರು. 1993-94ರಲ್ಲಿ 8.98 ಕೋಟಿ ರೂ.ಗಳನ್ನು ಸಂಗ್ರಹಿಸಲಾಯಿತು. 94-95ರಲ್ಲಿ 13.00 ಕೋಟಿ ರೂ.ಗಳನ್ನು ನಿರೀಕ್ಷಿಸಲಾಗಿದ್ದು ಫೆಬ್ರವರಿ 93ರ ಅಂತ್ಯದವರೆಗೆ 12.78 ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದೆ. ಇದು ಕಳೆದ ಸಾಲಿನಲ್ಲಿ ಇದೇ ಅವಧಿಗೆ ಸಂಗ್ರಹಣೆಯಾದ ಮೊತ್ತದ ಮೇಲೆ ಶೇ. 30.14ರಷ್ಟು ವಾರ್ಷಿಕ ಬೆಳವಣಿಗೆ ದರ ಹೊಂದಿದೆ.

ಇಲಾಖೆ ಕಚೇರಿಯೊಳಗಿನ ಗಣಕ ಯಂತ್ರ :

ಇಲಾಖೆಯು ವಿವಿಧ ಕಚೇರಿಗಳಿಂದ ಬರುವ ಅಂಕಿ ಅಂಶಗಳ ಮಾಹಿತಿಯನ್ನು ವಿಶ್ಲೇಷಿಸುವ ಉದ್ದೇಶವನ್ನಿಟ್ಟುಕೊಂಡು ಇಲಾಖೆಯಲ್ಲಿ ನವೆಂಬರ್ 84ರಲ್ಲಿ ಸ್ಥಾಪಿತವಾದ ಕಚೇರಿಯೊಳಗಿನ ಗಣಕ ಕೇಂದ್ರವು ತನ್ನ ಕಾರ್ಯವನ್ನು ಮುಂದುವರೆಯಿಸಿದೆ.

ತೆರಿಗೆ ಸಂಗ್ರಹಣೆಗೆ ಆದ ವೆಚ್ಚ :

ಇಲಾಖೆಯು ಆಡಳಿತ ಮತ್ತು ತೆರಿಗೆ ಮತ್ತು ಸಂಗ್ರಹಣೆಗಾಗಿ 1993-94ರಲ್ಲಿ 31.07 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದ್ದು, ಇದು ಆದಾಯದ ಶೇ. 1.20ರಷ್ಟಾಗಿರುತ್ತದೆ. ಪ್ರಸಕ್ತ ವರ್ಷದಲ್ಲಿ ಅಕ್ಟೋಬರ್ 94ರ ಅಂತ್ಯದವರೆಗೆ 21.05 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಕಳೆದ ಐದು ವರ್ಷಗಳಲ್ಲಿ ವಸೂಲಾದ ತೆರಿಗೆ ಆದಾಯ ಮತ್ತು ವಿವಿಧ ಅಧಿನಿಯಮಗಳ ನಿರ್ವಹಣೆಗಾಗಿ ಇಲಾಖೆಯು ಭರಿಸುತ್ತಿರುವ ವೆಚ್ಚಗಳು, ಆದಾಯದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದು ಹಾಗೂ ಆಡಳಿತ ವೆಚ್ಚಗಳು ಸಾಮಾನ್ಯವಾಗಿ ಕೆಳಮಟ್ಟದಲ್ಲಿ ಇರುವುದನ್ನು ತೋರಿಸುತ್ತದೆ. ಸಂಬಂಧಪಟ್ಟ ಅಂಕಿಗಳನ್ನು ಕೆಳಗೆ ಕೊಡಲಾಗಿದೆ.

(ಕೋಟಿ ರೂ.ಗಳಲ್ಲಿ)

| ವರ್ಷಗಳು | ಎಲ್ಲಾ ಅಧಿನಿಯಮಗಳ ಮೇರೆಗೆ ವಸೂಲಾದ ಆದಾಯ | ವೆಚ್ಚ | ಆದಾಯಕ್ಕೆ ತಗುಲಿದ ಶೇಕಡಾವಾರು ವೆಚ್ಚ |
|---|---|---|---|
| 1989-90 | 1232.45 | 19.66 | 1.59 |
| 1990-91 | 1489.93 | 19.97 | 1.34 |
| 1991-92 | 1857.00 | 24.13 | 1.30 |
| 1992-93 | 2027.63 | 27.00 | 1.33 |
| 1993-94 | 2577.58 | 31.07 | 1.20 |
| 1994-95 | 1391.07 | 21.05 | 1.51 |
| (ಅಕ್ಟೋಬರ್ 94ರ ಅಂತ್ಯದವರೆಗೆ) | | | |

## ಅನುಬಂಧ -1

### ಮಾರ್ಚ್ 1994ರ ಅಂತ್ಯದವರೆಗೆ ಇದ್ದಂತೆ ಕಾಯ್ದೆವಾರು ಬೇಡಿಕೆ, ಸಂಗ್ರಹಣೆ ಮತ್ತು ಬಾಕಿ ವಿವರಗಳು

(ಕೋಟಿ ರೂ.ಗಳಲ್ಲಿ)

| ಕಾಯ್ದೆ | ಬೇಡಿಕೆ (ತಗಾದೆ) | ಸಂಗ್ರಹಣೆ | ಬಾಕಿ |
|---|---|---|---|
| 1. ಕರ್ನಾಟಕ ಮಾರಾಟ ತೆರಿಗೆ | 2247.05 | 1945.12 | 301.93 |
| 2. ಕೇಂದ್ರ ಮಾರಾಟ ತೆರಿಗೆ | 404.39 | 318.83 | 85.56 |
| 3. ಮನರಂಜನಾ ತೆರಿಗೆ | 54.23 | 52.44 | 1.79 |
| 4. ಕೃಷಿ ವರಮಾನ ತೆರಿಗೆ | 15.00 | 9.16 | 5.84 |
| 5. ಪ್ರವೇಶ ತೆರಿಗೆ | 162.42 | 132.01 | 30.41 |
| 6. ವೈಭವ ತೆರಿಗೆ | 13.41 | 13.17 | 00.24 |
| 7. ವೃತ್ತಿ ತೆರಿಗೆ | 85.50 | 74.92 | 10.58 |
| 8. ಜೂಜು ತೆರಿಗೆ | 11.05 | 11.05 | - |
| ಒಟ್ಟು | 2993.05 | 2556.70 | 436.35 |

## ಅನುಬಂಧ-2

### ದಿನಾಂಕ 31.12.94 ರಂದು ಎಲ್ಲಾ ಕಾಯ್ದೆಗಳಡಿಯಲ್ಲಿ ಇದ್ದಂತೆ ಹಳೆ ಬಾಕಿ ವಿವರಗಳು

(ಕೋಟಿ ರೂ.ಗಳಲ್ಲಿ)

| | | |
|---|---|---|
| 1) 31-3-1994ರಂದು ಇದ್ದಂತೆ ಹಳೆಬಾಕಿ | 436.35 | |
| 2) 31-12-94ರವರೆಗೆ ಸಂಗ್ರಹಿಸಿದ ಮತ್ತು ಕಡಿಮೆ ಮಾಡಿದ ಮೊತ್ತ (ಬಾಲ್ತಿ ಬೇಡಿಕೆ ಹೊರತುಪಡಿಸಿ) | 174.46 | (ತಾತ್ಕಾಲಿಕ) |
| 3) 31-12-94 ರಂದು ಇದ್ದಂತೆ ಬಾಕಿ ಮೊತ್ತ | 261.89 | " |

ಇವರಲ್ಲಿ :

| | | |
|---|---|---|
| ಅ) ಸಂಗ್ರಹವಾಗಬೇಕಾದದ್ದು | 59.73 | (ತಾತ್ಕಾಲಿಕ) |
| ಆ) ನ್ಯಾಯಾಲಯಗಳಿಂದ ತಡೆಯಾಜ್ಞೆಗೆ ಒಳಪಟ್ಟದ್ದು | 119.85 | (") |
| ಇ) ಇತರೆ* | 82.31 | (") |

* ಸೂಚನೆ : ಇದರಲ್ಲಿ ಬಡ್ಡಿ ರಹಿತ ಸಾಲ, ಕಂತುಗಳಲ್ಲಿ ನೀಡುವ ಸೌಲಭ್ಯ, ಕೊಟ್ಟಿದ್ದು ಮನ್ನಾ ಮಾಡಲು ಪ್ರಸ್ತಾಪಿಸಿದ್ದು, ಪಟಿವಾಟು ದಿವಾಳಿ ಪ್ರಕರಣಗಳು ಮತ್ತು ಉತ್ತೇಜನ ಯೋಜನೆಗಳಲ್ಲಿ ಒಳಗೊಂಡವುಗಳು ಸೇರಿರುತ್ತವೆ.

## ಅನುಬಂಧ - III

## ಇತರೆ ಅಧಿನಿಯಮಗಳಡಿಯಲ್ಲಿ ಸಂಗ್ರಹಿಸಲಾದ ತೆರಿಗೆ ಆದಾಯ ವಿವರಗಳು

1. ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ 1958

(ಕೋಟಿ ರೂ.ಗಳಲ್ಲಿ)

| ವರ್ಷಗಳು | ಆದಾಯ ಸಂಗ್ರಹಣೆ | ವಾರ್ಷಿಕ ಬೆಳವಣಿಗೆ (ಶೇಕಡಾ) |
|---|---|---|
| 1989-90 | 40.75 | 6.62 |
| 1990-91 | 42.00 | 3.07 |
| 1991-92 | 48.33 | 15.04 |
| 1992-93 | 49.64 | 2.71 |
| 1993-94 | 59.32 | 19.50 |
| 1994-95 (ಫೆಬ್ರವರಿ 95ರ ಅಂತ್ಯದವರೆಗೆ) | 42.61 | (-)9.30 |

5953-3

2. ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ 1957 :

| | | |
|---|---|---|
| 1989-90 | 15.52 | 48.37 |
| 1990-91 | 7.23 | (-)53.41 |
| 1991-92 | 9.07 | 25.45 |
| 1992-93 | 10.86 | 19.74 |
| 1993-94 | 9.01 | (-)17.03 |
| 1994-95 (ಫೆಬ್ರುವರಿ 95ರ ಅಂತ್ಯದವರೆಗೆ) | 15.57 | 111.55 |

3. ಕರ್ನಾಟಕ ವೃತ್ತಿ ಕಸುಬುಗಳು, ಆಜೀವಿಕೆಗಳು ಮತ್ತು ಉದ್ಯೋಗ ಮೇಲಿನ ತೆರಿಗೆ ಅಧಿನಿಯಮ 1976 :

| | | |
|---|---|---|
| 1989-90 | 24.03 | 56.85 |
| 1990-91 | 40.23 | 67.42 |
| 1991-92 | 47.89 | 19.04 |
| 1992-93 | 61.07 | 27.52 |
| 1993-94 | 77.98 | 27.69 |
| 1994-95 (ಫೆಬ್ರುವರಿ 95ರ ಅಂತ್ಯದವರೆಗೆ) | 79.64 | 20.90 |

ಅನುಬಂಧ - III (ಮುಂದುವರಿದದ್ದು)

4. ಕರ್ನಾಟಕ ವಿಲಾಸ (ಹೋಟೇಲುಗಳು ಮತ್ತು ವಸತಿ ಗೃಹಗಳು) ತೆರಿಗೆ ಅಧಿನಿಯಮ 1979:

| | | |
|---|---|---|
| 1989-90 | 5.42 | 78.88 |
| 1990-91 | 6.46 | 19.19 |
| 1991-92 | 7.81 | 20.90 |
| 1992-93 | 10.48 | 34.19 |
| 1993-94 | 11.65 | 11.16 |
| 1994-95 (ಫೆಬ್ರುವರಿ 95ರ ಅಂತ್ಯದವರೆಗೆ) | 15.64 | 30.55 |

5. ಕರ್ನಾಟಕ ಸ್ಥಳೀಯ ಪ್ರದೇಶಕ್ಕೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ವಿಧಿಸುವ ತೆರಿಗೆ ಅಧಿನಿಯಮ 1979 :

| | | |
|---|---|---|
| 1989-90 | 56.67 | 19.53 |
| 1990-91 | 65.49 | 15.56 |
| 1991-92 | 82.06 | 25.30 |
| 1992-93 | 109.84 | 33.85 |
| 1993-94 | 132.68 | 20.79 |
| 1994-95 (ಫೆಬ್ರುವರಿ 95ರ ಅಂತ್ಯದವರೆಗೆ) | 116.77 | (-)4.71 |

6. ಮೈಸೂರು ಪಣ ತೆರಿಗೆ ಅಧಿನಿಯಮ 1932 :

| | | |
|---|---|---|
| 1989-90 | 8.79 | 2.45 |
| 1990-91 | 11.60 | 31.97 |
| 1991-92 | 8.61 | (-)25.78 |
| 1992-93 | 9.95 | 15.56 |
| 1993-94 | 8.98 | (-)9.75 |
| 1994-95 (ಫೆಬ್ರವರಿ 95ರ ಅಂತ್ಯದವರೆಗೆ) | 12.78 | 30.14 |

## ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು

## 1994–95ನೇ ಸಾಲಿನ ವಾರ್ಷಿಕ ವರದಿ (1995ರ ಜನವರಿ ಅಂತ್ಯದಲ್ಲಿರುವಂತೆ)

ರಾಜ್ಯ ಲೆಕ್ಕಪತ್ರ ಇಲಾಖೆಯು ಕರ್ನಾಟಕ ಸರ್ಕಾರದ ಪ್ರಮುಖ ಇಲಾಖೆಗಳಲ್ಲಿ ಒಂದಾಗಿದ್ದು, ಸರ್ಕಾರದ ಆರ್ಥಿಕ ಇಲಾಖೆಯ ನೇರ ನಿಯಂತ್ರಣಕ್ಕೊಳಪಟ್ಟಿರುತ್ತದೆ. ''ನಿಯಂತ್ರಕರು'' ಈ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ನಗರಸಭೆ, ಪುರಸಭೆ ಮಂಡಲ ಪಂಚಾಯತಿಗಳು, ಗ್ರಾಮ ಪಂಚಾಯತಿಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು, ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳು (ಕಾಡಾ), ಸಾರ್ವಜನಿಕ ಗ್ರಂಥಾಲಯಗಳು, ಕಾನೂನು ಸೇವಾ ಮಂಡಳಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಕರ್ನಾಟಕ ಸರ್ಕಾರದ ವಿವಿಧ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳ ಉಪಹಾರ ಗೃಹ, ಮುಜರಾಯಿ ಸಂಸ್ಥೆಗಳು ಮತ್ತು ರಾಜ್ಯದಲ್ಲಿನ 8 ವಿಶ್ವವಿದ್ಯಾಲಯಗಳು ಹಾಗೂ ಅವುಗಳ ಘಟಕಗಳು ಇನ್ನೂ ಮುಂತಾದ ಸಂಸ್ಥೆಗಳ ಪರಿಶೋಧನೆಯು ಆಯಾಯ ಸಂಸ್ಥೆಗಳ ಕಾಯಿದೆ ಅಥವಾ ಅಧಿಸೂಚನೆಯ ಮೇರೆಗೆ ರಾಜ್ಯ ಲೆಕ್ಕಪತ್ರ ಇಲಾಖೆಯ ಲೆಕ್ಕ ಪರಿಶೋಧನಾ ವ್ಯಾಪ್ತಿಗೆ ಒಳಪಟ್ಟಿವೆ. ಇವುಗಳಲ್ಲಿ ವಿಶ್ವವಿದ್ಯಾಲಯಗಳು ಹಾಗೂ ಅವುಗಳ ಘಟಕಗಳ ಲೆಕ್ಕಪರಿಶೋಧನೆಯು ಆಯಾ ವಿಶ್ವವಿದ್ಯಾಲಯದ ಸರ್ಕಾರಿ ಲೆಕ್ಕಪರಿಶೋಧಕರ ಕಛೇರಿಯಿಂದಲೂ ಉಳಿದ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯು ಪ್ರತಿ ಜಿಲ್ಲಾ ಕೇಂದ್ರದಲ್ಲಿರುವ 'ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿ' ಗಳು ಮತ್ತು

ಪ್ರಧಾನ ಕಛೇರಿಯಿಂದ ನಡೆಯುತ್ತದೆ. ಇದಲ್ಲದೆ ಸರ್ಕಾರದ ಅಧೀನದ ಶಾಖೆಗೆ ಸರ್ಕಾರಿ ತಿಳಿಸುವ ಸಂಸ್ಥೆ ಅಥವಾ ಇಲಾಖೆಗಳ ವಿಶೇಷ ಲೆಕ್ಕಪರಿಶೋಧನೆಯನ್ನು ಸಹ ತೆಗೆದುಕೊಳ್ಳಲಾಗುವುದು.

ಮಹಾನಗರಪಾಲಿಕೆಗಳ ಲೆಕ್ಕಪರಿಶೋಧನೆಯನ್ನು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಆಕ್ಟ್ 1976ರ ಸೆಕ್ಷನ್ 150ರ ಪ್ರಕಾರ ಆಯಾ ಮಹಾನಗರಪಾಲಿಕೆಗಳಿಗೆ ಸರ್ಕಾರದಿಂದ ನಿಯೋಜಿಸಲ್ಪಟ್ಟ ' ಮುಖ್ಯ ಲೆಕ್ಕಪರಿಶೋಧಕರಿಂದ ನಡೆಸಲಾಗುತ್ತಿದ್ದು, ಅವರುಗಳು ನಿಯಂತ್ರಕರ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವರು.

ಈ ಇಲಾಖೆಯ ಎಲ್ಲಾ 19 ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲಗಳು ಮತ್ತು 8 ವಿಶ್ವವಿದ್ಯಾಲಯಗಳ ಸರ್ಕಾರಿ ಲೆಕ್ಕಪರಿಶೋಧಕರ ಕಛೇರಿಗಳು ಈ ಇಲಾಖೆಯ ನೇರ ನಿಯಂತ್ರಣಕ್ಕೊಳಪಟ್ಟಿವೆ.

1989—90ನೇ ಸಾಲಿನಿಂದ ಮಂಡಲ ಪಂಚಾಯತಿಗಳಲ್ಲಿ ಜಾರಿಯಲ್ಲಿದ್ದ '' ಜವಾಹರ ರೋಜಗಾರ ಯೋಜನೆ'' ಯ ಲೆಕ್ಕಪರಿಶೋಧನಾ ಕಾರ್ಯವು ಈ ಇಲಾಖೆಯಿಂದ ನಡೆಯುತ್ತಿದೆ.

<u>ಲೆಕ್ಕಪರಿಶೋಧನಾ ಕಾರ್ಯಕ್ರಮ, ಮುನ್ನಡೆ, ಪ್ರಗತಿ</u>.

1994—95ನೇ ಸಾಲಿನಲ್ಲಿ 3990 ಸಂಸ್ಥೆಗಳ 4670 ವರ್ಷಗಳ ಲೆಕ್ಕಪರಿಶೋಧನೆಯನ್ನು ಈ ಇಲಾಖೆಯು ಹಾಕಿಕೊಂಡಿದ್ದು, 1994ರ ಡಿಸೆಂಬರ್ ಅಂತ್ಯಕ್ಕೆ 2832 ಸಂಸ್ಥೆಗಳ 2929 ವರ್ಷಗಳ ಲೆಕ್ಕಪರಿಶೋಧನೆಯನ್ನು ಮುಗಿಸಿರುತ್ತದೆ. ಉಳಿದ ಸಂಸ್ಥೆಗಳ ಲೆಕ್ಕಪರಿಶೋಧನಾ ಕಾರ್ಯವು ಪ್ರಗತಿಯಲ್ಲಿದ್ದು

1995ರ ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

## ಧಾರ್ಮಿಕ ದತ್ತಿ, ನಿಧಿಗಳ ಪದನಿಮಿತ್ತ ಕೋಶಾಧಿಕಾರಿಯಾಗಿ ನಿಯಂತ್ರಕರು

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 361 ಮತ್ತು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಆರ್) 5052: ಐಪಿ:22-53-5 ದಿನಾಂಕ 12-12-1953ರ ಪ್ರಕಾರ ರಾಜ್ಯ ಲೆಕ್ಕಪತ್ರ ಇಲಾಖೆಯ 'ನಿಯಂತ್ರಕರು' ಕರ್ನಾಟಕ ರಾಜ್ಯದಲ್ಲಿನ ಧಾರ್ಮಿಕ ದತ್ತಿ ನಿಧಿಗಳ ಪದನಿಮಿತ್ತ ಕೋಶಾಧಿಕಾರಿಯಾಗಿ ಕಾರ್ಯನಿರ್ವಹಿಸುವರು. ಈ ಅಧಿಕಾರದಡಿಯಲ್ಲಿ ನಿಯಂತ್ರಕರು 259 ದತ್ತಿಗಳಿಗೆ ಸಂಬಂಧಿಸಿದ 23.95 ಲಕ್ಷ ರೂ.ಗಳ ಭದ್ರತಾ ಪತ್ರಗಳ ಮತ್ತು ನಿಯಂತ್ರಕರ ಅಧೀನದಲ್ಲಿರುವ ಮುಜರಾಯಿ ಸಂಸ್ಥೆಗಳಿಗೆ ಸಂಬಂಧಿಸಿದ ದತ್ತಿ ನಿಧಿ 77.33 ಲಕ್ಷ ರೂ.ಗಳ ಸಾವಧಿ ಠೇವಣಿಗಳ ಅಭಿರಕ್ಷಕರಾಗಿದ್ದಾರೆ.

## ಹೆಚ್ಚುವರಿ ಉಪಲಬ್ಧಿಗಳ (ಕಡ್ಡಾಯ ಠೇವಣಾತಿ) ಲೆಕ್ಕಪತ್ರ ನಿರ್ವಹಣೆ

1974ರ ಹೆಚ್ಚುವರಿ ಉಪಲಬ್ಧಿಗಳ (ಕಡ್ಡಾಯ ಠೇವಣಾತಿ) ಅಧಿನಿಯಮದ ಮೇರೆಗೆ ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರು ರಾಜ್ಯದಲ್ಲಿನ ಎಲ್ಲಾ ಸ್ಥಳೀಯ ಸಂಸ್ಥೆಗಳ ನಾಮನಿರ್ದೇಶಿತ ಪ್ರಾಧಿಕಾರಿಗಳಾಗಿದ್ದಾರೆ. 1995ರ ಜನವರಿ ಅಂತ್ಯಕ್ಕೆ ಈ ಯೋಜನೆಯ 4,26,520-00ರೂ.ಗಳು ವಿವಿಧ ಸ್ಥಳೀಯ ಸಂಸ್ಥೆಗಳಿಗೆ ಮರುಪಾವತಿಯಾಗಬೇಕಿದ್ದು, ಈ ಹಣವನ್ನು ಮರುಪಾವತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

## ಸಿಬ್ಬಂದಿ ವರ್ಗದ ನಿಯೋಜನೆ

ರಾಜ್ಯ ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳ ಮತ್ತು

ಸಿಬ್ಬಂದಿಯವರ ಸೇವೆಯನ್ನು ಸರ್ಕಾರದ ವಿವಿಧ ಇಲಾಖೆಗಳಿಗೆ ಸ್ಥಳೀಯ ಸಂಸ್ಥೆಗಳಿಗೆ ಅವುಗಳ ಲೆಕ್ಕಪತ್ರ ನಿರ್ವಹಣೆ ಆರ್ಥಿಕ ಕಾರ್ಯಗಳ ನಿರ್ವಹಣೆ ಮತ್ತು ಆಂತರಿಕ ಲೆಕ್ಕ ಪರಿಶೋಧನಾ ಕಾರ್ಯಗಳಿಗಾಗಿ ನಿಯೋಜನೆಯ ಮೇರೆಗೆ ಕೊಡಲಾಗುತ್ತಿದೆ. ಈ ಇಲಾಖೆಯ ಒಟ್ಟು 3525 ಹುದ್ದೆಗಳಲ್ಲಿ, 1994-95ನೇ ಸಾಲಿನಲ್ಲಿ 651 ಹುದ್ದೆಗಳು ಮಾತ್ರ ಈ ಇಲಾಖೆಯ ನೇರ ನಿಯಂತ್ರಣದಲ್ಲಿದ್ದು ಉಳಿದ ಹುದ್ದೆಗಳು ರಾಜ್ಯದ ವಿವಿಧ ಸರ್ಕಾರಿ ಇಲಾಖೆ, ಸ್ಥಳೀಯ ಸಂಸ್ಥೆಗಳಲ್ಲಿವೆ. ಅಂದರೆ ಈ ಇಲಾಖೆಯ ಒಟ್ಟು ಸಿಬ್ಬಂದಿಯಲ್ಲಿ ಶೇಕಡ 80ರಷ್ಟು ಸಿಬ್ಬಂದಿಯವರು ಈ ಇಲಾಖೆಯ ಹೊರಗೆ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವರು.

## ತರಬೇತಿ ಕಾರ್ಯಕ್ರಮ

1994-95ನೇ ಸಾಲಿನ ಜನವರಿ 95ರ ಅಂತ್ಯಕ್ಕೆ 44 ಜನ 'ಎ' ಮತ್ತು 'ಬಿ' ವರ್ಗದ ಅಧಿಕಾರಿಗಳನ್ನು ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿ ನಡೆದ ತರಬೇತಿ ಶಿಬಿರಗಳಿಗೆ ನಿಯೋಜಿಸಲಾಗಿದೆ. ಹಾಗೂ ಕರ್ನಾಟಕ ಸಚಿವಾಲಯ ತರಬೇತಿ ಸಂಸ್ಥೆ, ಬೆಂಗಳೂರು ಇಲ್ಲಿ ಲೋಕೋಪಯೋಗಿ ಇಲಾಖಾ ಲೆಕ್ಕಪತ್ರ ನಿರ್ವಹಣೆ ಬಗ್ಗೆ ನಡೆದ ಕಾರ್ಯಾಗಾರಕ್ಕೆ ಲೋಕೋಪಯೋಗಿ ಇಲಾಖೆಯ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 27 ಜನ ಲೆಕ್ಕಾಧೀಕ್ಷಕರುಗಳನ್ನು ನಿಯೋಜಿಸಲಾಗಿದೆ. ವಿವಿಧ ಜಿಲ್ಲೆಗಳಲ್ಲಿನ ಜಿಲ್ಲಾ ತರಬೇತಿ ಸಂಸ್ಥೆಗಳ ಮೂಲಕ ಜನವರಿ 1995ರ ಅಂತ್ಯದವರೆಗೆ 116 ಜನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಅಲ್ಪಾವಧಿಯ ತರಬೇತಿ ಕಾರ್ಯಕ್ರಮಗಳಲ್ಲಿ ತರಬೇತಿ ಪಡೆದಿರುತ್ತಾರೆ. ಫೆಬ್ರವರಿ ಮತ್ತು ಮಾರ್ಚ್ 1995ರ ಮಾಹೆಗಳಲ್ಲಿ ಇನ್ನೂ ಕೆಲವು ಅಲ್ಪಾವಧಿಯ ತರಬೇತಿ

ಶಿಬಿರಗಳನ್ನು ಏರ್ಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಸರ್ಕಾರದ ವಿವಿಧ ಇಲಾಖೆ, ಮಂಡಳಿ ಮತ್ತು ಇತರೆ ಸ್ವಾಯತ್ತ ಸಂಸ್ಥೆಗಳಲ್ಲಿ ನಿಯೋಜನೆಯ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದರಿಂದ ಜಾರಿ ಸೇವೆಯಲ್ಲಿರುವ ಹಾಗೂ ಹೊಸದಾಗಿ ಈ ಇಲಾಖೆಗೆ ನೇಮಕಗೊಳ್ಳುವ ನೌಕರರಿಗಾಗಿ ಈ ಇಲಾಖೆಯ ವತಿಯಿಂದಲೇ ಪ್ರತ್ಯೇಕ ತರಬೇತಿ ಶಿಬಿರಗಳನ್ನು ನಡೆಸಲು ಮಂಜೂರಾತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಈಗಾಗಲೇ ಸಲ್ಲಿಸಲಾಗಿದೆ.

## ಇಲಾಖೆಯ ಖರ್ಚು

1994—95ನೇ ಸಾಲಿಗೆ ರೂ. 386.33 ಲಕ್ಷಗಳ ಅಂದಾಜು ಮೊತ್ತವನ್ನು ಆಯವ್ಯಯ ಪುಸ್ತಕದಲ್ಲಿ ನಿಗದಿ ಪಡಿಸಲಾಗಿದ್ದು ಸೆಪ್ಟೆಂಬರ 94ರ ಅಂತ್ಯದವರೆಗೆ ರೂ.195.80 ಲಕ್ಷಗಳು ಖರ್ಚಾಗಿರುತ್ತವೆ.

1995—96ನೇ ಸಾಲಿಗೆ ಒಟ್ಟು 411.00 ಲಕ್ಷಗಳ ಆಯವ್ಯಯ ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

## ಲೆಕ್ಕಪರಿಶೋಧನಾ ಶುಲ್ಕ

ಈ ಇಲಾಖೆಯ ಲೆಕ್ಕಪರಿಶೋಧನಾ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆಗಳಿಂದ ಸಂಬಂಧಪಟ್ಟ ಕಾಯಿದೆ ಮತ್ತು ನಿಯಮಗಳಲ್ಲಿರುವಂತೆ ಲೆಕ್ಕಪರಿಶೋಧನಾ ಶುಲ್ಕವನ್ನು

RB N95
04142
COMMUNITY HEALTH CELL
LIBRARY AND DOCUMENTATION UNIT

ವಿಧಿಸಿ, ವಸೂಲಿಸಿ ಸರ್ಕಾರಕ್ಕೆ ಜಮಾ ಮಾಡಿಸಲಾಗುತ್ತಿದ್ದು, 1993—94ನೇ ಸಾಲಿನಲ್ಲಿ ಒಟ್ಟು 78·14 ಲಕ್ಷ ರೂ·ಗಳನ್ನು ಲೆಕ್ಕಪರಿಶೋಧನಾ ಶುಲ್ಕವಾಗಿ ಸರ್ಕಾರದ ಬೊಕ್ಕಸಕ್ಕೆ ಜಮಾ ಮಾಡಿಸಲಾಗಿದೆ· 1994—95ನೇ ಸಾಲಿನ ಸಪ್ಟೆಂಬರ್ 94ರ ಅಂತ್ಯದವರೆಗೆ 59·18 ಲಕ್ಷ ರೂ·ಗಳನ್ನು ಲೆಕ್ಕ ಪರಿಶೋಧನಾ ಶುಲ್ಕವಾಗಿ ಸರ್ಕಾರದ ಬೊಕ್ಕಸಕ್ಕೆ ಜಮಾ ಮಾಡಿಸಲಾಗಿದೆ ಹಾಗೂ 1995ರ ಮಾರ್ಚ್ ಅಂತ್ಯಕ್ಕೆ ಇನ್ನೂ 10·00 ಲಕ್ಷ ರೂ·ಗಳು ಜಮಾ ಆಗುವ ನಿರೀಕ್ಷೆ ಇದೆ·

## ಕರ್ನಾಟಕ ಸರ್ಕಾರಿ ವಿಮಾ ಇಲಾಖೆ : ಬೆಂಗಳೂರು-1.

## 1994-95 ನೇ ಸಾಲಿನ ವಾರ್ಷಿಕ ವರದಿ

### 1) ಜೀವ ವಿಮಾ ಶಾಖೆ:-

ಈ ಇಲಾಖೆಯು ದಿನಾಂಕ 1-4-1994 ರಿಂದ ದಿನಾಂಕ 31-12-94 ರವರೆಗೆ 97.00 ಕೋಟಿ ರೂ.ಗಳ ವಿಮಾ ಮೊಬಲಗಿನ 52,185 ಪಾಲಿಸಿಗಳನ್ನು ನೀಡಿ 48.00 ಲಕ್ಷ ರೂ.ಗಳ ಪ್ರಾರಂಭಿಕ ಠೇವಣಿಯನ್ನೊಳಗೊಂಡ 46 ಕೋಟಿ ರೂ.ಗಳ ವಿಮಾ ಕಂತು ಆದಾಯವನ್ನು ಸಂಗ್ರಹಿಸಿದೆ. ಈ ವಹಿವಾಟನ್ನು ವರ್ಷಾಂತ್ಯಕ್ಕೆ ಸುಮಾರು 129 ಕೋಟಿ ರೂ.ಗಳ ವಿಮಾ ಮೊಬಲಗಿನ ಮೌಲ್ಯದ 69,580 ಪಾಲಿಸಿಗಳನ್ನು ನೀಡಿ 64 ಲಕ್ಷ ರೂ.ಗಳ ಪ್ರಾರಂಭಿಕ ಠೇವಣಿಯನ್ನೊಳಗೊಂಡ 61 ಕೋಟಿ ರೂ.ಗಳ ವಿಮಾ ಕಂತು ಆದಾಯವನ್ನು ಸಂಗ್ರಹಿಸುವ ಗುರಿಯನ್ನು ಇಲಾಖೆಯು ಹೊಂದಿರುತ್ತದೆ.

ದಿನಾಂಕ: 1-4-1994 ರಿಂದ 31-12-94 ರವರೆಗೆ 51 ಕೋಟಿ ರೂ.ಗಳ ನಗದು ಸಾಲವನ್ನು 55,272 ಪಾಲಿಸಿದಾರರಿಗೆ ಮಂಜೂರು ಮಾಡಲಾಗಿದೆ ಮತ್ತು ದಿನಾಂಕ 31-3-95 ರ ವೇಳೆಗೆ ಈ ಮೊತ್ತವು 68 ಕೋಟಿ ರೂ.ಗಳಾಗುವುದೆಂದು ಅಂದಾಜು ಮಾಡಲಾಗಿದೆ. ದಿ: 30-11-94ರಂದು ಜೀವ ವಿಮಾ ನಿಧಿಯು ಶಿಲ್ಕು ರೂ.591 ಕೋಟಿಗಳಿದ್ದು ದಿನಾಂಕ 31-3-1995ರ ವೇಳೆಗೆ ಸುಮಾರು ರೂ.660 ಕೋಟಿಗಳಾಗುವುದೆಂದು ಅಂದಾಜು ಮಾಡಲಾಗಿದೆ. ದಿನಾಂಕ 31-3-1992 ಕ್ಕೆ ಅಂತ್ಯಗೊಂಡ ದ್ವೈವಾರ್ಷಿಕಕ್ಕೆ ವಿಮಾ ಪಾಲಿಸಿಗಳ ಮೇಲೆ ಪ್ರತಿ ಸಾವಿರ ರೂ.ಗಳ ವಿಮಾ ಮೊತ್ತಕ್ಕೆ ಸಾಲಿಯಾನ 86 ರೂ.ಗಳ ಅಧಿಲಾಭಾಂಶವನ್ನು ನೀಡಿದೆ. 1992-94ನೇ ಸಾಲಿನ ದ್ವೈವಾರ್ಷಿಕ ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿದ್ದು ವಿಮಾದಾರರಿಗೆ ಅತೀ ಶೀಘ್ರದಲ್ಲಿಯೇ ಬೋನಸ್ಸನ್ನು ಘೋಷಿಸಲು ಇಲಾಖೆಯು ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದೆ.

### 2) ವಾಹನ ವಿಮಾ ಶಾಖೆ:-

ಈ ಶಾಖೆಯಲ್ಲಿ ದಿನಾಂಕ 1-4-1994 ರಿಂದ 31-12-94ರ ಅವಧಿಯಲ್ಲಿ 112 ಲಕ್ಷ ರೂ.ಗಳ ವಿಮಾ ಕಂತು ಆದಾಯದ 13798 ಸರ್ಕಾರಿ ಮತ್ತು ಸರ್ಕಾರಿ ಸ್ವಾಮ್ಯದ ಹಾಗೂ ಸರ್ಕಾರಿ ಮುಂಗಡ ಪಡೆದ ವಾಹನಗಳನ್ನು ವಿಮೆಗೆ ಒಳಪಡಿಸಿದೆ. ಈ ಶಾಖೆಯಲ್ಲಿ ದಿನಾಂಕ 31-3-1995 ರ ವೇಳೆಗೆ

150 ಲಕ್ಷ ರೂ.ಗಳ ವಿಮಾ ಕಂತು ಆದಾಯ ತರಬಹುದಾದ 18397 ವಾಹನಗಳನ್ನು ವಿಮೆಗೊಳಪಡಿಸುವ ಗುರಿ ಇಟ್ಟುಕೊಳ್ಳಲಾಗಿದೆ. ವಾಹನ ವಿಮಾ ನಿಧಿಯು ಶಿಲ್ಕು 31-12-94 ರಂದು 8 ಕೋಟಿ ರೂ.ಗಳನ್ನು ಮೀರಿದ್ದು ದಿನಾಂಕ 31-3-1995 ರ ವೇಳೆಗೆ ಇದು 10 ಕೋಟಿ ರೂ.ಗಳಾಗುವ ಅಂದಾಜು ಮಾಡಲಾಗಿದೆ.

3) <u>ಕುಟುಂಬ ಕಲ್ಯಾಣ ನಿಧಿ ಶಾಖೆ</u>:

ಇದು ಸ್ಥಳೀಯ ಸಂಸ್ಥೆಗಳು ಮತ್ತು ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಸಾಮಾಜಿಕ ಭದ್ರತೆಯ ಕ್ರಮವಾಗಿ ಮುಂದುವರಿಯುತ್ತಿದೆ.

:- 0 -:

ಈ ಮೇಲ್ಕಂಡ ಮೂರು ಶಾಖೆಗಳ ವ್ಯವಹಾರದ ಅಂಕಿ ಅಂಶಗಳ ವಿವರಣೆಗಳನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

4) <u>ಆಡಳಿತಾತ್ಮಕ ಅಧಿಕಾರ</u>:

ಇಲಾಖೆಯು ಪಾಲಿಸಿದಾರರಿಗೆ ದಕ್ಷ ಹಾಗೂ ತ್ವರಿತ ಸೇವೆಯನ್ನು ಸಲ್ಲಿಸುವ ದೃಷ್ಟಿಯಿಂದ ರಾಜ್ಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ಆಡಳಿತಾಧಿಕಾರವನ್ನು ಜಿಲ್ಲಾ ಮಟ್ಟದವರೆಗೆ ವಿಕೇಂದ್ರೀಕರಣಗೊಳಿಸಲಾಗಿದೆ. ಜಿಲ್ಲಾ ವಿಮಾಧಿಕಾರಿಗಳಿಗೆ ಹಾಗೂ ವಿಭಾಗೀಯ ಉಪ ನಿರ್ದೇಶಕರುಗಳಿಗೆ ಕ್ರಮವಾಗಿ ರೂ. 40 ಸಾವಿರ ಹಾಗೂ ರೂ.50 ಸಾವಿರಗಳಿಗೆ ಪಾಲಿಸಿ ನೀಡಲು, ಸಾಲ ಮಂಜೂರು ಮಾಡಲು ಮತ್ತು ಹಕ್ಕು ಕೋರಿಕೆಗಳನ್ನು ಇತ್ಯರ್ಥಪಡಿಸಲು ಆರ್ಥಿಕ ಅಧಿಕಾರವನ್ನು ನೀಡಿದೆ.

<u>ಗಣಕೀಕರಣ</u>:

ಈ ಇಲಾಖೆಯು ಸರ್ಕಾರಿ ಕಛೇರಿಗಳ ಆಧುನೀಕರಣ ಯೋಜನೆಯಡಿಯಲ್ಲಿ ಗಣಕಯಂತ್ರವನ್ನು ಖರೀದಿಸಿದ್ದು, ಬೆಂಗಳೂರು ಕಛೇರಿಗಳಲ್ಲಿರುವ ನೌಕರರ ವೇತನ ಬಿಲ್ಲು ಸಿದ್ಧಪಡಿಸುವಿಕೆ ಮತ್ತು ಅವಧಿಪೂರ್ಣಗೊಳ್ಳುವ ವಿಮಾದಾರರ ಪಟ್ಟಿ ತಯಾರಿಕೆ ಕಾರ್ಯಗಳನ್ನು ನಿರ್ವಹಿಸಲು ಉಪಯೋಗಿಸಿ

ಕೊಳ್ಳಲಾಗುತ್ತಿದೆ. ಹಾಗೂ ರಾಷ್ಟ್ರೀಯ ಮಾಹಿತಿ ಕೇಂದ್ರದ ಸಹಕಾರದಿಂದ ವಿಮಾದಾರರ ಖಾತೆಹಾಳೆಗಳ ಮಾಸ್ಟರ್ ಇಂಡೆಕ್ಸ್ ತಯಾರಿಕೆ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ. ಮತ್ತು ಕರ್ನಾಟಕ ಸರ್ಕಾರಿ ಗಣಕ ಕೇಂದ್ರದ ಸಹಕಾರದಿಂದ ವಿಮಾಗಣನಾ ಕಾರ್ಯಕ್ಕೆ ಬೇಕಾಗುವ ಮಾಹಿತಿಯ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಅಲ್ಲದೆ, ಇಲಾಖೆಯ ಎಲ್ಲಾ ವಿಭಾಗಗಳಲ್ಲೂ ಹಂತ ಹಂತವಾಗಿ ಕಂಪ್ಯೂಟರನ್ನು ಅಳವಡಿಸುವ ಯೋಜನೆಯಿದೆ. ಪ್ರಥಮವಾಗಿ ವಾಹನ ವಿಭಾಗದ ಗಣಕೀಕರಣವನ್ನು ಕೈಗೆತ್ತಿ–ಕೊಳ್ಳಲಾಗಿದೆ.

ಇಲಾಖೆಯ ಎಲ್ಲಾ ಕೆಲಸ ಕಾರ್ಯಗಳು ತೃಪ್ತಿಕರವಾಗಿ ಮುಂದುವರಿಯುತ್ತಿವೆ.

ಕರ್ನಾಟಕ ಸರ್ಕಾರಿ ವಿದ್ಯುತ್ ಇಲಾಖೆ, ಬೆಂಗಳೂರು—1

| ಕ್ರ.ಸಂ. ಸಂಖ್ಯೆ 1 | ವಿವರ ನಿರ್ದಿಷ್ಟಾಂಶಗಳು 2 | [illegible] 3 | 1991—92 4 | 1992—93 5 | 1993—94 6 | 1·4·94ರಿಂದ 31-12-94 7 | 1994-95 [illegible] 8 |
|---|---|---|---|---|---|---|---|
| | **1·ಜಲವಿದ್ಯುತ್ ಶಾಖೆ** | | | | | | |
| 1· | ನೀರಾವರಿ ಪಂಪುಸೆಟ್ಟುಗಳು | ಸಂಖ್ಯೆ | 36091 | 28717 | 34696 | 52185 | 69530 |
| 2· | ಹೊಸ ಪಂಪುಸೆಟ್ಟುಗಳ ಪ್ರಾರಂಭಿಕ ಠೇವಣಿ | ಲಕ್ಷ ರೂ·ಗಳು | 39 | 33 | 40 | 48 | 64 |
| 3· | ಹೊಸ ಪಂಪುಸೆಟ್ಟುಗಳ ವಿದ್ಯುತ್ ಮೊಬಲಗು | ಲಕ್ಷ ರೂ·ಗಳು | 10536 | 7963 | 10472 | 9708 | 12944 |
| 4· | ಚಾಲ್ತಿಯಲ್ಲಿರುವ ಬಾಕಿ ಪಂಪುಸೆಟ್ಟುಗಳು | ಸಂಖ್ಯೆ | 805687 | 810642 | 813108 | 837812 | 848330 |
| 5· | ಚಾಲ್ತಿಯಲ್ಲಿರುವ ಬಾಕಿ ವಿದ್ಯುತ್ ಸರಾಸರಿ ಆದಾಯ | ಕೋಟಿ ರೂ· | 50 | 54 | 57·5 | 46 | 61 |
| 6· | ಚಾಲ್ತಿಯಲ್ಲಿರುವ ಬಾಕಿ ವಿದ್ಯುತ್ ಮೊಬಲಗು | ಕೋಟಿ ರೂ·ಗಳು | 998 | 1072 | 1162 | 1245 | 1273 |
| 7· | ವಾರ್ಷಿಕ ಮಾರಾಟದ ದರ, ಕೋಟಿಗಳ ಪಂಪುಸೆಟ್ಟುಗಳು | ಸಂಖ್ಯೆ | | | | | |
| | ಅ) ಲಘು ಪೂರೈಕೆ | ·· | 20239 | 22467 | 25086 | 20301 | 27057 |
| | ಆ) ವಾಣಿಜ್ಯ | ·· | 2575 | 2501 | 3441 | 2533 | 3277 |
| | ಇ) ವಿದ್ಯುತ್ ಶಾಖಾ ವಲಯ | ·· | 1808 | 1210 | 1446 | 1137 | 1515 |
| 8· | ವಾರ್ಷಿಕ ಮಾರಾಟದ ದರ, ಕೋಟಿಗಳ ಪಂಪುಸೆಟ್ಟುಗಳ ವಿದ್ಯುತ್ ಮೊಬಲಗು | ಕೋಟಿ ರೂ·ಗಳು | | | | | |
| | ಅ) ಲಘು ಪೂರೈಕೆ | ಕೋಟಿ ರೂ·ಗಳು | 10·33 | 11·25 | 16·35 | 14·99 | 20 |
| | ಆ) ವಾಣಿಜ್ಯ | ·· | 2·84 | 3·12 | 3·83 | 3·11 | 4·14 |
| | ಇ) ವಿದ್ಯುತ್ ಶಾಖಾ ವಲಯ | ·· | 0·83 | 0·86 | 0·79 | 0·73 | 0·97 |
| 9· | ವಸೂಲಾದ ಮಾರಾಟದ ಸಾಲದ ಮೊಬಲಗು | ·· | 43·01 | 48·80 | 65·88 | 50·65 | 67·53 |
| 10· | ಜಲವಿದ್ಯುತ್ ನಿಗಮ ಶುಲ್ಕ | ·· | 376 | 503 | 577 | 591·20 30-11-94ರ… | [illegible] |

| 1 2 | 3 | 4 | 5 | 6 | 7 | 8 |
|---|---|---|---|---|---|---|
| 2. ವಾಹನ ವಿಮಾ ಶಾಖೆ | | | | | | |
| 1. ವಿಮೆ ಮಾಡಲಾದ ವಾಹನಗಳು | ಸಂಖ್ಯೆ | 19536 | 18163 | 17697 | 13798 | 18397 |
| 2. ಒಟ್ಟು ವಿಮಾ ಕಂತು ಆದಾಯ | ಲಕ್ಷ ರೂ.ಗಳು | 135 | 139 | 136 | 112 | 150 |
| 3. ಪಾವತಿ ಮಾಡಲಾದ ಹಕ್ಕು ಕೋರಿಕೆಗಳು | ಸಂಖ್ಯೆ | 238 | 318 | 200 | 234 | 312 |
| 4. ಪಾವತಿ ಮಾಡಲಾದ ಹಕ್ಕು ಕೋರಿಕೆಗಳ ವಿಮಾ ಮೊಬಲಗು | ಲಕ್ಷ ರೂ.ಗಳು | 31 | 40 | 34 | 39 | 51 |
| 5. ವಾಹನ ವಿಮಾ ನಿಧಿಯ ಶಿಲ್ಕು | ಲಕ್ಷ ರೂ.ಗಳು | 496 | 596 | 698 | 771 | 1027 |
| 3. ಕುಟುಂಬ ಕಲ್ಯಾಣ ನಿಧಿ ಶಾಖೆ | | | | | | |
| 1. ಒಟ್ಟು ಜಮೆ | ಲಕ್ಷ ರೂ.ಗಳು | 110 | 129 | 115 | 93 | 125 |
| 2. ಒಟ್ಟು ಪಾವತಿಗಳು | .. | 284 | 273 | 340 | 273 | 364 |
| 3. ನಿಧಿಯ ಶಿಲ್ಕು | .. | 4864 | 5040 | 5923 | — | 6269 |

## ವಾರ್ಷಿಕ ವರದಿ 1994–95

## ಖಜಾನೆ ಇಲಾಖೆ

ಖಜಾನೆ ನಿರ್ದೇಶಕರು, ಖಜಾನೆ ಇಲಾಖೆಯ ಮುಖ್ಯ ನಿಯಂತ್ರಣಾಧಿಕಾರಿಗಳಾಗಿದ್ದು, ಈ ಇಲಾಖೆಯು ದಕ್ಷತೆಯಿಂದ ಕೆಲಸ ನಿರ್ವಹಿಸುವುದನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಖಜಾನೆ ಇಲಾಖೆಯು ಸಚಿವಾಲಯದ ಆರ್ಥಿಕ ಇಲಾಖೆಯ ಆಡಳಿತದ ಅಧೀನಕ್ಕೆ ಒಳಪಟ್ಟಿರುತ್ತದೆ.

### 2.1 ಖಜಾನೆಗಳ ರಚನೆ

ರಾಜ್ಯದಲ್ಲಿ ಹೊಸದಾಗಿ ಜಿಲ್ಲೆಗೆ ಸೇರಿದ ಮುಖ್ಯ ಜಿಲ್ಲಾ ಖಜಾನೆಯನ್ನು ಸೇರಿದಂತೆ 21 ಜಿಲ್ಲಾ ಖಜಾನೆಗಳಿರುತ್ತವೆ. ಬೆಂಗಳೂರಿನಲ್ಲಿ ಎರಡು ಜಿಲ್ಲಾ ಖಜಾನೆಗಳ (ನಗರ ಮತ್ತು ಗ್ರಾಮಾಂತರ) ಜೊತೆಗೆ, ಬೆಂಗಳೂರು ನಗರದಲ್ಲಿ ನಡೆಯುವ ಸರ್ಕಾರಿ ವಹಿವಾಟಿಗಾಗಿ ರಾಜ್ಯ ಹುಜೂರ್ ಖಜಾನೆ ಹಾಗೂ ಪಿಂಚಣಿ ವಿತರಣೆಗೋಸ್ಕರ ಪಿಂಚಣಿ ಪಾವತಿ ಖಜಾನೆಗಳು ಸ್ಥಾಪನೆಯಾಗಿರುತ್ತವೆ. ಬೆಂಗಳೂರಿನಲ್ಲಿರುವ ರಾಜ್ಯ ಹುಜೂರ್ ಖಜಾನೆಯು ಬೆಂಗಳೂರು ನಗರದ ಎಲ್ಲಾ ಸರ್ಕಾರಿ ಕಚೇರಿಗಳ ಬಿಲ್ಲುಗಳ ಹಾಗೂ ಅನುದಾನಗಳ ಪಾವತಿಯ ಕೆಲಸಗಳನ್ನು ನಿರ್ವಹಿಸುತ್ತದೆ.

2.2. ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ನಗರ ಜಿಲ್ಲಾ ಖಜಾನೆ, ಗ್ರಾಮಾಂತರ ಜಿಲ್ಲಾ ಖಜಾನೆ, ಮೈಸೂರು, ಗುಲ್ಬರ್ಗಾ ಹಾಗೂ ಬೆಳಗಾಂನಲ್ಲಿರುವ ಜಿಲ್ಲಾ ಖಜಾನೆಗಳ ವಹಿವಾಟು ರಾಜ್ಯದ ಇತರೇ ಜಿಲ್ಲಾ ಖಜಾನೆಗಳಿಗಿಂತ ಹೆಚ್ಚಾಗಿರುವುದರಿಂದ ಇವುಗಳ ಆಡಳಿತ ಪ್ರಭಾರವನ್ನು ಉಪ ನಿರ್ದೇಶಕರುಗಳಿಗೆ ವಹಿಸಲಾಗಿದೆ. ಇದರ ಜೊತೆಗೆ ರಾಜ್ಯದ ಎಲ್ಲಾ ಜಿಲ್ಲೆಗಳ ಹಾಗೂ ಬೆಂಗಳೂರು ನಗರದ

ಮುದ್ರಾಂಕ ಮಾರಾಟಗಾರರಿಗೆ ಮುದ್ರಾಂಕಗಳನ್ನು ಸರಬರಾಜು ಮಾಡುವ ಸಲುವಾಗಿ ಬೆಂಗಳೂರಿನಲ್ಲಿ ಮುದ್ರಾಂಕ ಭಂಡಾರವು ಈ ಕೆಲಸವನ್ನು ನಿರ್ವಹಿಸುತ್ತಿದೆ. ಈ ಮುದ್ರಾಂಕ ಭಂಡಾರವು ಓರ್ವ ಉಪ ನಿರ್ದೇಶಕರ ನಿಯಂತ್ರಣದಲ್ಲಿದೆ.

3.1 ರಾಜ್ಯದಲ್ಲಿ 1994-95ರ ಸಾಲಿನ ಆರಂಭದಲ್ಲಿ 190 ಉಪ ಖಜಾನೆಗಳಿದ್ದು, ಅವುಗಳಲ್ಲಿ 179 ಬ್ಯಾಂಕುಗಳ ಮೂಲಕ ವ್ಯವಹರಿಸುವ ಖಜಾನೆಗಳು ಮತ್ತು 11 ಬ್ಯಾಂಕೇತರ ಉಪ ಖಜಾನೆಗಳಾಗಿವೆ. 1994-95ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕು ಶಂಕರನಾರಾಯಣದಲ್ಲಿ ದಿನಾಂಕ 13-1-1995 ರಿಂದ ಪೂರ್ಣ ಪ್ರಮಾಣದ ನೂತನ ಉಪ ಖಜಾನೆಯನ್ನು ಪ್ರಾರಂಭಿಸಲಾಗಿದೆ.

3.2 ಉಪ ಖಜಾನೆಗಳ ವ್ಯವಹಾರದ ಪರಿಮಾಣವನ್ನು ಗಣನೆಗೆ ತೆಗೆದುಕೊಂಡು 178 ಉಪ ಖಜಾನೆಗಳನ್ನು ಪ್ರಾಂತಿಕ ಉಪ ಖಜಾನೆಯ ದರ್ಜೆಗೆ ಏರಿಸಲಾಗಿದೆ. ರಾಜ್ಯದಲ್ಲಿರುವ ಖಜಾನೆಗಳ ವ್ಯವಹಾರ ಪರಿಮಾಣ ಈ ಕೆಳಕಂಡಂತಿದೆ:-

| ವರ್ಷ | ಬಿಲ್ಲುಗಳ ಸಂಖ್ಯೆ | ಮೊಬಲಗು |
|---|---|---|
| 1993-94 | 8737465 | 135568285910 |
| 1994-95 ಡಿಸೆಂಬರ 94ರ ಮಾಹೆಯವರೆಗೆ | 6890305 | 101243628517 |

| ವರ್ಷ | ಓಚರುಗಳ ಸಂಖ್ಯೆ | ಮೊತ್ತ |
|---|---|---|
| 1993-94 | 8971466 | 125697222179 |
| 1994-95 ಡಿಸೆಂಬರ 94ರ ಮಾಹೆಯವರೆಗೆ | 7326822 | 119371844768 |

3.3 ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ಜನರ ಅನುಕೂಲಕ್ಕಾಗಿ ತಾಲ್ಲೂಕು ಕೇಂದ್ರವನ್ನು ಬಿಟ್ಟು ರಾಜ್ಯದ ವಿವಿಧ ಹೋಬಳಿ ಮಟ್ಟದಲ್ಲಿ ಒಟ್ಟು 15 ಉಪ ಖಜಾನೆಗಳನ್ನು ಸ್ಥಾಪಿಸಲಾಗಿದೆ.

3.4 ಈ ಕೆಳಕಂಡ ಬ್ಯಾಂಕೇತರ ಉಪ ಖಜಾನೆಗಳು ರಿಸರ್ವ ಬ್ಯಾಂಕ ಹಣದ ಕೋಠಡಿಯನ್ನು (ಆರ್.ಬಿ.ಐ ಚೆಸ್ಟ್) ಹೊಂದಿರುತ್ತವೆ.

(ಅ) ಕುಂದಗೋಳ (ಆ) ನವಲಗುಂದ
(ಇ) ರೋಣ (ಈ) ಶಿಗ್ಗಾಂವ
(ಉ) ಶಿರಹಟ್ಟಿ (ಊ) ಸುರಪ

3.5 ಈ ಕೆಳಗೆ ನಮೂದಿಸಿದ ಉಪ ಖಜಾನೆಗಳನ್ನು ಬ್ಯಾಂಕಿಂಗ ಉಪ ಖಜಾನೆಗಳಾಗಿ ಪರಿವರ್ತಿಸಿದ ನಂತರವೂ ಸಹಾ ಜನರ ಅನುಕೂಲತೆಗಾಗಿ ರಿಸರ್ವ ಬ್ಯಾಂಕಿನ ಹಣದ ಕೋಠಡಿಗಳನ್ನು ಸ್ಥಾಪಿಸಿ ಮುಂದುವರಿಸಲಾಗಿದೆ.

(1) ಮುಂಡರಗಿ
(2) ಮುಂಡಗೋಡು
(3) ಕಲಘಟಗಿ

4.1 ಬೆಂಗಳೂರಿನ ರಾಜ್ಯ ಹುಜೂರ ಖಜಾನೆಯಲ್ಲಿ ಖಜಾನೆ ಲೆಕ್ಕ ಗಣಕೀಕರಣಕ್ಕಾಗಿ ಕಂಪ್ಯೂಟರ ಯಂತ್ರಗಳನ್ನು 1985 ರಿಂದಲೇ ಸ್ಥಾಪಿಸಲಾಗಿದ್ದು, ಅಲ್ಲಿನ ವರ್ಗೀಕೃತ ಲೆಕ್ಕವನ್ನು ಕಂಪ್ಯೂಟರನಿಂದ ಪೂರ್ಣ ಪ್ರಮಾಣದಲ್ಲಿ ತಯಾರಿಸಿ, ಮಹಾಲೇಖಪಾಲರಿಗೆ ಕಳುಹಿಸಲಾಗುತ್ತಿದೆ. ಈ

ಪದ್ಧತಿಯನ್ನು ಇತರೇ ಜಿಲ್ಲಾ ಖಜಾನೆಗಳಲ್ಲೂ ಜಾರಿಗೆ ತರಲು ಈಗಾಗಲೇ 1991 ರಿಂದ ಜಿಲ್ಲಾ ಖಜಾನೆಗಳಿಗೆ ಗಣಕೀಕರಣ ಯಂತ್ರಗಳನ್ನು ಸರಬರಾಜು ಮಾಡಲಾಗಿದ್ದು, ಏಪ್ರಿಲ 94 ರಿಂದ ರಾಜಸ್ವ ಶೀರ್ಷಿಕೆ ಲೆಕ್ಕಗಳನ್ನು ಹಾಗೂ ಭಾಗಶಃ ಸೇವಾ ಶೀರ್ಷಿಕೆಗಳ ಲೆಕ್ಕಗಳನ್ನು ಗಣಕ ಯಂತ್ರದಿಂದ ತಯಾರಿಸಿ, ಮಹಾಲೇಖಪಾಲರಿಗೆ ಕಳುಹಿಸಲಾಗುತ್ತಿದೆ. ಈ ಕೆಲಸವನ್ನು ರಾಷ್ಟ್ರದಾದ್ಯಂತ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಜಿಲ್ಲಾ ಪಂಚಾಯತ್‌ನಲ್ಲಿ ಅಳವಡಿಸಿರುವ ಗಣಕ ಯಂತ್ರಗಳ ಮೂಲಕ ನ್ಯಾಷನಲ ಇನಫರ್ಮ್ಯಾಟಿಕ ಸೆಂಟರದವರ ಸಹಕಾರದಿಂದ ನಿರ್ವಹಿಸಲಾಗುತ್ತಿದೆ. ಗಣಕೀಕರಣದಲ್ಲಿ ಹೊಂದಿರುವ ಅನುಭವ ಹಾಗೂ ಪ್ರಗತಿಯನ್ನು ಅನುಸರಿಸಿ 1994–95ರಲ್ಲಿ ಜಿಲ್ಲಾ ಖಜಾನೆಗಳಲ್ಲಿ ಅಳವಡಿಸಿರುವ ಗಣಕ ಯಂತ್ರಗಳ ಮಟ್ಟಗಳನ್ನು ಉನ್ನತಿಸಲಾಗಿದೆ. ಕಾರ್ಯಕ್ರಮವನ್ನು ಅಡಚಣೆ ಇಲ್ಲದೇ ಮುಂದುವರಿಸುವ ದೃಷ್ಟಿಯಿಂದ ಖಜಾನೆ ನೌಕರರಿಗೆ ಖಾಯಂ ಆಗಿ ತರಬೇತಿ ಸೌಲಭ್ಯಗಳನ್ನು ಅಳವಡಿಸಲಾಗಿದೆ ಮತ್ತು ಇನ್ನೂ ಬಾಕಿ ಇರುವ ಅನೇಕ ಲೆಕ್ಕ ವಿಭಾಗಗಳ ಗಣಕೀಕರಣದ ಕಾರ್ಯ ಚಟುವಟಿಕೆಗಳನ್ನು ಮುಂದುವರೆಸಲಾಗಿದೆ.

4.2 ಸರ್ಕಾರಿ ನೌಕರರಿಗೆ ಗೃಹ ನಿರ್ಮಾಣ ಮುಂಗಡವನ್ನು ಹೆಚ್.ಡಿ.ಎಫ್.ಸಿ. ಮುಖಾಂತರ ವಿತರಿಸಲಾಗುತ್ತಿದೆ. ಇದರ ಖಾತೆದಾರರ ಪೂರ್ಣ ಲೆಕ್ಕವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಖಜಾನೆ ನಿರ್ದೇಶಕರಿಗೆ ವಹಿಸಲಾಗಿದೆ. ಡಿಸೆಂಬರ ಮಾಹೆ 94ರವರೆಗೆ 13,000 ಸರ್ಕಾರಿ ನೌಕರರಿಗೆ ಈ ಯೋಜನೆಯಲ್ಲಿ ಹಣದ ಮುಂಗಡಗಳನ್ನು ವಿತರಣೆ ಮಾಡಿದ್ದು, ಅದರ ಲೆಕ್ಕವನ್ನು

RB N95 04142

COMMUNITY HEALTH CELL
LIBRARY AND DOCUMENTATION UNIT
BANGALORE.

ಇರುವ ಕೆಲಸವನ್ನು ಕ್ರಮವಾಗಿ ನಿರ್ವಹಿಸಲಾಗುತ್ತಿದೆ. ಇದು ವರಿಗುಣ ಗೃಹ ನಿರ್ಮಾಣ ಮಂಡಳಿ (ಹೆಚ್.ಬಿ.ಎ) ಕಾಂತರ್ಗ ಕ್ರಮದ ಲೆಕ್ಕದ ಈ ಕೆಲಸವನ್ನು ಮಹಾಲೇಖಪಾಲರು ನಿರ್ವಹಿಸುತ್ತಿದ್ದು, ಅದನ್ನು ಈಗ ಖಜಾನೆ ನಿರ್ದೇಶಕರಿಗೆ ವಹಿಸಲಾಗಿದೆ.

5. <u>ಬ್ಯಾಂಕೇತರ ಉಪ ಖಜಾನೆಗಳಲ್ಲಿ ನಿಗದಿಪಡಿಸಿದ ಸಾಮಾನ್ಯ ಶಿಲ್ಕು:—</u>

ಬ್ಯಾಂಕೇತರ ಉಪ ಖಜಾನೆಗಳಲ್ಲಿ ಸರ್ಕಾರದ ಮತ್ತು, ಸಾರ್ವಜನಿಕರ ದೈನಂದಿನ ನಗದು ವ್ಯವಹಾರಕ್ಕಾಗಿ ಅಗತ್ಯವಿರುವ 1991—95ನೇ ಸಾಲಿಗಾಗಿ ನಿಗದಿಪಡಿಸಿದ ಸಾಮಾನ್ಯ ಶಿಲ್ಕು 11.34 ಲಕ್ಷ ರೂ.ಗಳಾಗಿದ್ದು, 1995—96ರ ಸಾಲಿಗೆ 15.67 ಲಕ್ಷದ ಮೊತ್ತಕ್ಕೆ ಸಾಮಾನ್ಯ ಶಿಲ್ಕನ್ನು ನಿಗದಿಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದು, ಸರ್ಕಾರದ ಆದೇಶವನ್ನು ನಿರೀಕ್ಷಿಸಲಾಗಿದೆ.

6. <u>ಖಜಾನೆಗಳ ತಪಾಸಣೆಗಳು</u>

ವರದಿಯಲ್ಲಿನ ಸಾಲಿನಲ್ಲಿ ಫೆಬ್ರವರಿ 95ರ ಮಾಹೆಯವರೆಗೆ 22 ಜಿಲ್ಲಾ ಖಜಾನೆಗಳು ಮತ್ತು 54 ಉಪ ಖಜಾನೆಗಳ ಪರಿವೀಕ್ಷಣೆ ಮಾಡಲಾಗಿದೆ. ಇದಲ್ಲದೇ ಉಪ ಖಜಾನೆಗಳ ಎಲ್ಲಾ ಮಟ್ಟದ ಆಡಳಿತವನ್ನು ಚುರುಕುಗೊಳಿಸುವ ಉದ್ದೇಶದಿಂದ ಈ ವರ್ಷದ ಸಾಲಿನಲ್ಲಿ 38 ಉಪ ಖಜಾನೆಗಳ ಅನಿರೀಕ್ಷಿತ ಪರಿವೀಕ್ಷಣೆಗಳನ್ನು ಸಹಾ ನಿರ್ವಹಿಸಲಾಗಿದೆ.

7. <u>ಪಿಂಚಣಿ ಬಟವಾಡೆ</u>

ರಾಜ್ಯದ ಎಲ್ಲಾ ಜಿಲ್ಲಾ ಮತ್ತು ಉಪ ಖಜಾನೆಗಳಲ್ಲಿ ವಿವಿಧ ಸರ್ಕಾರಗಳ ನಿವೃತ್ತಿ ವೇತನ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ ಮತ್ತು ನಿರ್ಗತಿಕ ವಿಧವಾ ಮಾಶಾಸನಗಳ ಬಟವಾಡೆ ಮಾಡುವ ಕೆಲಸವನ್ನು ವಹಿಸಿದ್ದು, ಡಿಸೆಂಬರ 94ರ ಅಂತ್ಯದವರೆಗೆ ಎಲ್ಲಾ ವಿಧದ ಪಿಂಚಣಿದಾರರು ಸೇರಿದಂತೆ ಒಟ್ಟು ಸಂಖ್ಯೆ 16,40,168 ಇರುತ್ತದೆ.

8. <u>ಆಯವ್ಯಯ</u>

1994–95ನೇ ಸಾಲಿನ ಖಜಾನೆ ಇಲಾಖೆಯ (ಯೋಜನೇತರ) ವೆಚ್ಚ ಮಾರ್ಚ 95ರ ಅಂತ್ಯದವರೆಗೆ 16,90,20,000 ರೂ.ಗಳಾಗಿರುತ್ತವೆ.

(ಅಂದಾಜು – ಕಾರಣ ಮಾರ್ಚ 95ರ ಅಂತ್ಯದ ತನಕದ ವಾಸ್ತವಿಕ ಖರ್ಚನ್ನು ಇನ್ನೂ ಪೂರ್ಣಗೊಳಿಸಿಲ್ಲ )

## ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆಯ 1994-95 ನೇ ಸಾಲಿನ ವಾರ್ಷಿಕ ವರದಿ

ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆಯು ಸಣ್ಣ ಉಳಿತಾಯ, ಕರ್ನಾಟಕ ರಾಜ್ಯ ಲಾಟರಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ ಬಗ್ಗೆ ವ್ಯವಹರಿಸುತ್ತಿದೆ.

### ಸಣ್ಣ ಉಳಿತಾಯ

ಸಣ್ಣ ಉಳಿತಾಯ ಯೋಜನೆಯು ಈ ಕೆಳಕಂಡ ಉದ್ದೇಶಗಳನ್ನು ಹೊಂದಿದೆ.

ಅ) ಜನರಲ್ಲಿ ಮಿತವ್ಯಯ ಹಾಗೂ ಉಳಿತಾಯದ ಸ್ವಭಾವವನ್ನು ಬೆಳೆಸುವುದರೊಂದಿಗೆ ಅವರು ಮಾಡಿದ ಉಳಿತಾಯಕ್ಕೆ ಭದ್ರತೆ ಹಾಗೂ ಹೆಚ್ಚಿನ ಆದಾಯ ನೀಡುವುದು.

ಆ) ಆರ್ಥಿಕ ವ್ಯವಸ್ಥೆಯ ಮೇಲಾಗುವ ಹಣದುಬ್ಬರವನ್ನು ತಡೆದು ತನ್ಮೂಲಕ ಬೆಲೆ ಏರಿಕೆಯನ್ನು ನಿಯಂತ್ರಿಸುವುದು.

ಇ) ಜನರ ಉಳಿತಾಯದ ಹಣವನ್ನು ಬೇರೆ ಅಭಿವೃದ್ಧಿ ಕಾರ್ಯ- ಕ್ರಮಗಳಲ್ಲಿ ತೊಡಗಿಸುವ ಮೂಲಕ ರಾಷ್ಟ್ರದ ಅಭಿವೃದ್ಧಿ -ಯಲ್ಲಿ ಜನರು ಪಾಲ್ಗೊಳ್ಳುವಂತೆ ಮಾಡುವುದು.

ಈ) ಓದಲು, ಬರೆಯಲು ಬರುವವರನ್ನು (ಮಹಿಳೆಯರೂ ಸೇರಿ) ಸಣ್ಣ ಉಳಿತಾಯ ಏಜೆಂಟರುಗಳನ್ನಾಗಿ ನಿಯೋಜಿಸಿಕೊಂಡು ಸ್ವಲ್ಪ ಮಟ್ಟಿಗೆ ನಿರುದ್ಯೋಗ ಸಮಸ್ಯೆಯನ್ನು ನಿವಾರಿ- ಸುವುದು.

1994-95 ನೇ ಸಾಲಿಗೆ ರಾಜ್ಯವು ರೂ.1800 ಕೋಟಿ ಒಟ್ಟು ಹಾಗೂ ರೂ.600 ಕೋಟಿ ನಿವ್ವಳ ಉಳಿತಾಯ ಸಂಗ್ರಹಣೆಯ ಗುರಿಯನ್ನು ಹಮ್ಮಿಕೊಳ್ಳಲಾಗಿದ್ದು, ದಿನಾಂಕ:1-4-1994 ರಿಂದ 31-1-1995 ರ ಅವಧಿಯಲ್ಲಿ ರೂ.1832.87 ಕೋಟಿ ಒಟ್ಟು – ಹಾಗೂ ರೂ.1101.77 ಕೋಟಿ ನಿವ್ವಳ ಸಂಗ್ರಹಣೆಯನ್ನು ರಾಜ್ಯ – ದಲ್ಲಿ ಸಾಧಿಸಲಾಗಿದೆ. ಈವರೆಗೆ ನಿವ್ವಳ ಸಂಗ್ರಹಕ್ಕೆ ಪೈಕಿ ಕೇಂದ್ರ ಸರ್ಕಾರದಿಂದ ಒಟ್ಟು ರೂ.747.07 ಕೋಟಿ ದೀರ್ಘಾವಧಿ ಸಾಲದ ರೂಪದಲ್ಲಿ ಪಡೆಯಲಾಗಿದೆ.

ರಾಜ್ಯದಲ್ಲಿ ಸುಮಾರು 22600 ಕ್ರೂ ಬಿಕ್ಕಿ ಸಣ್ಣ ಉಳಿತಾಯದ ಅಧಿಕೃತ ಏಜೆಂಟರುಗಳಿದ್ದು, ಅವರುಗಳಿಂದ ದಿನಾಂಕ: 1-4-1994 ರಿಂದ 31-1-1995 ರ ಅವಧಿಯಲ್ಲಿ ಅಂದಾಜು ರೂ. 325 ಕೋಟಿಗಳಷ್ಟು ಠೇವಣಿ ಸಂಗ್ರಹಿಸಲಾಗಿರುತ್ತದೆ.

ಸಣ್ಣ ಉಳಿತಾಯದ ವಿವಿಧ ವಿನಿಯೋಗಗಳನ್ನು ಇನ್ನಷ್ಟು ಜನಪ್ರಿಯಗೊಳಿಸುವ ಸಲುವಾಗಿ ಪ್ರಸಕ್ತ ವರ್ಷದಲ್ಲಿ ಈ ಕೆಳಗಿನ ಯೋಜನೆಗಳನ್ನು ಜಾರಿಗೆ ತರಲಾಗಿದೆ.

1. ಸಣ್ಣ ಉಳಿತಾಯದ ವಿವಿಧ ವಿನಿಯೋಗಗಳ ಬಹುಮಾನ ಯೋಜನೆಯನ್ನು ದಿನಾಂಕ:1-8-1994 ರಿಂದ ಜಾರಿಗೆ ತರಲಾಗಿದೆ. ಇದರಡಿಯಲ್ಲಿ ಬಹುಮಾನ ವಿಜೇತರಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುತ್ತಿದೆ.

2. ಇಂದಿರಾ ವಿಕಾಸ ಪತ್ರ, ಕಿಸಾನ್ ವಿಕಾಸ ಪತ್ರ, ಮತ್ತು ರಾಷ್ಟ್ರೀಯ ಉಳಿತಾಯ ಪತ್ರ 8 ನೇ ಮಾಲಿಕೆಗಳಲ್ಲಿ ರೂ.5 ಲಕ್ಷಕ್ಕಿಂತ ಮೇಲ್ಪಟ್ಟು ಒಂದೇ ಇಡುಗಂಟಿನಲ್ಲಿ ಮಾಡಿದ ಠೇವಣಿಗೆ ಶೇಕಡಾ.2.5 ರಂತೆ ಪ್ರೋತ್ಸಾಹಕ ಧನವನ್ನು ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದೆ.

3. ರೂ.25,000- ದಿಂದ ರೂ.5 ಲಕ್ಷದವರೆಗೆ ಇಡುಗಂಟಿನಲ್ಲಿ ಇಂದಿರಾ ವಿಕಾಸ ಪತ್ರ, ಕಿಸಾನ್ ವಿಕಾಸ ಪತ್ರ, ಮಾಸಿಕ - ವರಮಾನ ಯೋಜನೆ ಮತ್ತು ಅವಧಿ ಠೇವಣಿ(3 ಮತ್ತು 5 ವರ್ಷಗಳು) ಗಳಲ್ಲಿ ದಿನಾಂಕ: 1-4-1994 ರಿಂದ 31-3-1995 ರ ವರೆಗಿನ ಅವಧಿಯಲ್ಲಿ ಮಾಡಿದ ಠೇವಣಿಗಳಿಗೆ ಶೇಕಡಾ 2 ರಂತೆ ಪ್ರೋತ್ಸಾಹಕ ಧನ ನೀಡುವ ಯೋಜನೆ - ಯನ್ನು ಜಾರಿಗೆ ತರಲಾಗಿದೆ.

4. ಪ್ರಸಕ್ತ ಸಾಲಿನಲ್ಲಿ ಒಂದು ಸಾವಿರ ಗ್ರಾಮಗಳನ್ನು ಬಚತ್ ಗ್ರಾಮಗಳಾಗಿ ಹಾಗೂ ಇಪ್ಪತ್ತು ತಾಲ್ಲೂಕುಗಳನ್ನು ಬಚತ್ ತಾಲ್ಲೂಕುಗಳಾಗಿ ಪರಿವರ್ತಿಸಲು ಗುರಿ ಹಾಕಿಕೊಳ್ಳ - ಲಾಗಿದೆ.

5. ಸಣ್ಣ ಉಳಿತಾಯ ಸಂಗ್ರಹಣೆ ಹೆಚ್ಚಿಸುವ ದೃಷ್ಟಿಯಿಂದ ಮುಖ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ಉಳಿತಾಯ ಸಂಗ್ರಹಣೆ ಮಾಡುವ ದೃಷ್ಟಿಯಿಂದ ಎಂ.ಪಿ.ಕೆ.ಬಿ.ವೈ. ಏಜೆಂಟರುಗಳ ಸ್ಪರ್ಧಾ ಯೋಜನೆಯನ್ನು ದಿನಾಂಕ: 1-4-1994 ರಿಂದ 31-12-1994 ರ ವರೆಗೆ ಜಾರಿಗೆ ತರಲಾಗಿದೆ.

6. ಅಂಚೆ ಕಛೇರಿಗಳು ಸಣ್ಣ ಉಳಿತಾಯ ಸಂಗ್ರಹಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಗಣನೀಯ ಸೇವೆ ಸಲ್ಲಿಸಿದ್ದ ಅಂಚೆ ಕಛೇರಿಗಳಿಗೆ ಹಾಗೂ ಅಧಿಕಾರಿ:ನೌಕರರಿಗೆ ಪ್ರೋತ್ಸಾಹಕ ಬಹುಮಾನ ನೀಡುವ ಯೋಜನೆಯನ್ನು ದಿನಾಂಕ: 1-4-1994 ರಿಂದ 31-3-1995 ರ ವರೆಗೆ ಜಾರಿಗೆ ತರಲಾಗಿದೆ.

7. ಸಣ್ಣ ಉಳಿತಾಯ ಸಂಗ್ರಹಣೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಜ್ಯದಾದ್ಯಂತ ವಿಶೇಷ ಆಂದೋಲನವನ್ನು ಏರ್ಪಡಿಸಲಾಗುವುದು. ಈ ಆಂದೋಲನವನ್ನು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ-ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಇತರೆ ಇಲಾಖೆಗಳ ಸಹಯೋಗದೊಂದಿಗೆ ನಡೆಸಲಾಗುತ್ತಿದೆ. ಈ ಆಂದೋಲನದ ಅವಧಿಯಲ್ಲಿ ರಾಜ್ಯದಾದ್ಯಂತ ಎಲ್ಲಾ ಕುಟುಂಬಗಳಿಂದ ಮುಖ್ಯವಾಗಿ ಗ್ರಾಮಾಂತರ ಪ್ರದೇಶದ ಶ್ರೀಮಂತ ರೈತರುಗಳಿಂದ ಉಳಿತಾಯ ಸಂಗ್ರಹಣೆ ಮಾಡುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

## ಕರ್ನಾಟಕ ರಾಜ್ಯ ಲಾಟರಿ

ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲವನ್ನು ಕ್ರೋಢೀಕರಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು 1969 ನೇ — ಸಾಲಿನಲ್ಲಿ ರಾಜ್ಯ ಲಾಟರಿ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯು ಪ್ರಾರಂಭವಾದಂದಿನಿಂದ ಯಶಸ್ವಿಯಾಗಿ ನಡೆಯುತ್ತಲಿದ್ದು, ರಾಷ್ಟ್ರದ್ಯಂತ ಅತ್ಯಂತ ವಿಶ್ವಾಸಪಾತ್ರವಾದ ಲಾಟರಿ — ಎಂದು ಹೆಸರುಗಳಿಸಿದೆ.

1969–70 ನೇ ಸಾಲಿನಿಂದ 1993–94 ನೇ ಸಾಲಿನವರೆಗೆ ಒಟ್ಟು ರೂ.63.5 ಕೋಟಿಗಳ ನಿವ್ವಳ ಆದಾಯವು ಸರ್ಕಾರಕ್ಕೆ ಬಂದಿರುತ್ತದೆ.

1994–95 ನೇ ಸಾಲಿನಲ್ಲಿ ವಿಶೇಷ ಬಂಪರ್ – 2 ಸೂಪರ ಬಂಪರ – 5, ಮಾಸಿಕ ಬಂಪರ್–5, ನಂದಿ ಬಂಪರ್ – 26 ಕೃಷ್ಣಾ ಬಂಪರ್ – 11, ಕಬಿನಿ – 4, ಕಪಿಲಾ ಸಾಪ್ತಾಹಿಕ – 52 ಮತ್ತು ರಜತಮಹೋತ್ಸವ ಬಂಪರ್ – 1 ಡ್ರಾಗಳನ್ನು ನಡೆಸಲಾಗುತ್ತಿದ್ದು.

1994–95 ನೇ ಸಾಲಿನ ಲಾಟರಿ ಯೋಜನೆಯಿಂದ ಸುಮಾರು ರೂ.6.23 ಕೋಟಿ ಆದಾಯ ಸರ್ಕಾರಕ್ಕೆ ಬರುವ ನಿರೀಕ್ಷೆ ಇರುತ್ತದೆ.

## ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆ

ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆಯನ್ನು ಸರ್ಕಾರವು 1982 ರ ಜನವರಿ 1 ರಿಂದ ಜಾರಿಗೆ ತಂದಿರುತ್ತದೆ. ಈ ಯೋಜನೆಯು ರಾಜ್ಯ ಸರ್ಕಾರಿ ನೌಕರರಿಗೆ ಮಾತ್ರ ಅನ್ವಯಿಸುತ್ತದೆ. ಸರ್ಕಾರಿ ನೌಕರರು ಸೇವೆಯಲ್ಲಿರುವಾಗಲೇ ಮರಣ ಹೊಂದಿದರೆ ನಾಮನಿರ್ದೇಶಕರಿಗೆ ವಿಮಾ ಸೌಲಭ್ಯವನ್ನು ಮತ್ತು ಸೇವೆಯಿಂದ ನಿವೃತ್ತಿ ಹೊಂದುವ ನೌಕರರಿಗೆ ಅವರು ತಮ್ಮ ಉಳಿತಾಯ ನಿಧಿಯಲ್ಲಿ ಹೊಂದಿರುವ ಒಟ್ಟು ಹಣವನ್ನು ಇಡುಗಂಟಿನ ರೂಪದಲ್ಲಿ ಪಾವತಿ ಮಾಡುವ ಇಬ್ಬಗೆಯ ಸೌಲಭ್ಯಗಳನ್ನು ಒದಗಿಸಿಕೊಡುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯಲ್ಲಿ ಪ್ರಸ್ತುತ ಸುಮಾರು 4.81 ಲಕ್ಷ ಸರ್ಕಾರಿ ನೌಕರರು ಸದಸ್ಯರಾಗಿರುತ್ತಾರೆ.

1994-95 ನೇ ಸೆಪ್ಟೆಂಬರ್ 1994 ರ ಅಂತ್ಯಕ್ಕೆ ಸರ್ಕಾರಿ ಸೇವೆಯಲ್ಲಿದ್ದಾಗಲೇ ಮೃತಪಟ್ಟ ನೌಕರರ ವಾರಸುದಾರರಿಗೆ ಹಾಗೂ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ ನೌಕರರಿಗೆ ಒಟ್ಟು 7.62 ಕೋಟಿ ರೂ.ಗಳನ್ನು ಪಾವತಿ ಮಾಡಲಾಗಿದೆ.

1994-95 ನೇ ಸಾಲಿನ ಸೆಪ್ಟೆಂಬರ್ 1994 ರ ಅಂತ್ಯಕ್ಕೆ ವಿವಾದ ಸ್ಥಿತಿಯಲ್ಲಿ ರೂ.25.24 ಕೋಟಿ ಮತ್ತು ಅವಿವಾದಿತ ಸ್ಥಿತಿಯಲ್ಲಿ ರೂ.216.39 ಕೋಟಿಗಳಂತೆ ಒಟ್ಟು ತೆರಿಗೆಯ ಬಾಕಿ 241.63 ಕೋಟಿ ಇರುತ್ತದೆ.

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು.